ಅಚಲ

ತಿಂಗಳ ಪತ್ರಿಕೆ

ನವೆಂಬರ್ 2002

ಜಾಗೃತಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ.. ಬೆಂಗಳೂರು

ಅಚಲ

ಸಂಪುಟ - 17 ಸಂಚಿಕೆ : 10/11

ಸಂಪಾದಕ ಮಂಡಲಿ
ಎನ್. ಗಾಯತ್ರಿ
ನೇಮಿಚಂದ್ರ, ದೇವಿ,
ಬಿ. ಎನ್. ಸುಮಿತ್ರಾಬಾಯಿ
ಶಾಂತಾನಾಗರಾಜ್
ಹೆಚ್. ಎನ್: ಗೀತಾ
ಹೇಮಲತಾ ಮಹಿಷಿ

ಪ್ರಕಾಶಕರು
ಜಾಗೃತಿ ಮಹಿಳಾ ಅಧ್ಯಯನ
ಕೇಂದ್ರ,
ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on
behalf of Jagruthi Mahila
Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೆ,

ಕಳೆದ 17 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ವಿವರಗಳು ಹೀಗಿವೆ

ವಾರ್ಷಿಕ ಚಂದಾ - ರೂ. 40/- (ವ್ಯಕ್ತಿಗಳಿಗೆ)
ರೂ. 75/- (ಸಂಸ್ಥೆಗಳಿಗೆ)
ಅಜೀವ ಚಂದಾ - ರೂ. 300/- (ವ್ಯಕ್ತಿಗಳಿಗೆ)
ರೂ. 400/- (ಸಂಸ್ಥೆಗಳಿಗೆ)

ಅಚಲ ವಿಳಾಸ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

ದೂರದರ್ಶನ ಧಾರಾವಾಹಿಗಳು ಮತ್ತು ಮಹಿಳೆ

ಜಾಗತೀಕರಣದ ಈ ದಿನಗಳಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿಗಳೆಲ್ಲಾ 'ಹೆಣ್ಣನ್ನು' ಸರಕು ಸಾಮಗ್ರಿಯಾಗಿಸಹೊರಟಿರುವುದು ಒಂದು ದುರಂತ. ಇದರ ಮತ್ತೊಂದು ಅತಿರೇಕವೆಂದರೆ ಈ ಬಿಕ್ಕಟ್ಟಿನ ಅರಿವಿದ್ದು ಅದರಿಂದ ಮುಕ್ತಳಾಗಬೇಕೆಂದು ಬಯಸುವ ಹೆಣ್ಣು ಮತ್ತು ಅವಳ ಪ್ರಯತ್ನಗಳೂ ಕೂಡ ಗೇಲಿಗೊಳಪಡುತ್ತಿರುವುದು ಮತ್ತು ವಿಕೃತವಾಗಿ ಚಿತ್ರಣಗೊಳ್ಳುತ್ತಿರುವುದು ಮತ್ತೂ ಆತಂಕದ ಸಂಗತಿ. ಇಂದು ದೂರದರ್ಶನದ ವೀಕ್ಷರಿಗೆ ಲಭ್ಯವಾಗುತ್ತಿರುವುದು ಇಂತಹ ಮಾದರಿಗಳೇ. ಈ ಮಾದರಿಗಳ ಗ್ರಾಹಕರು ಹೆಣ್ಣು ಗಂಡು ಮತ್ತು ಮಕ್ಕಳೂ ಆಗಿರುವುದರಿಂದ ಸಮಾಜದ ಅಸ್ವಾಸ್ಥ್ಯಕ್ಕೆ ನೇರವಾಗಿ ಕಾರಣವಾಗುತ್ತದೆ.

ಕಳೆದ ನಾಲ್ಕೈದು ವರ್ಷಗಳಲ್ಲಿ ದೂರದರ್ಶನಗಳಲ್ಲಿ ಬಿತ್ತರವಾಗುತ್ತಿರುವ ಧಾರವಾಹಿಗಳನ್ನು ಗಮನಿಸಿದಾಗ ಒಂದೇ ಸೂತ್ರಬದ್ಧವಾದ, ಯೋಜಿತವಾದ ಮಾದರಿಯನ್ನು ಗಮನಿಸಬಹುದಾಗಿದೆ. ಒಂದು ಕಡೆ ಸಾಂಪ್ರದಾಯಿಕವಾದ, ಜಡಗಟ್ಟಿದ, ಸಂಕುಚಿತವಾದ ಮೌಲ್ಯಗಳ ವೈಭವೀಕರಣ, ಮತ್ತೊಂದು ಕಡೆ ಇಂತಹ ಮೌಲ್ಯಗಳ ವಿರುದ್ಧ ಹೋರಾಡುವ ಮಹಿಳಾ ಹೋರಾಟಗಾರ್ತಿಯರ ಹೋರಾಟದ ವಿಕೃತರೂಪವೂ ಜೊತೆಜೊತೆಗೆ ಮಂಡಿಸಲ್ಪಡುವ ಮಾದರಿಯಾಗಿದೆ.

ಇಂದು ಬಿತ್ತರಗೊಳ್ಳುತ್ತಿರುವ ಪ್ರಮುಖ ಸೀರಿಯಲ್‌ಗಳ ಹೆಸರುಗಳು ಮಹಿಳೆಯರ ಹೆಸರುಗಳನ್ನು ಆಧರಿಸಿವೆ. ಕಾವೇರಿ, ಭಾಗೀರಥಿ, ಅಂಬಿಕಾ, ದುರ್ಗಾ, ಕಾವ್ಯಾಂಜಲಿ, ಪಾರ್ವತಿ, ಚಂದ್ರಿಕಾ - ಹೀಗೆ ಇನ್ನು ಮುಂತಾದವು. ಶೀರ್ಷಿಕೆ ಮಾತ್ರವಲ್ಲದೆ, ಅವುಗಳು ಸ್ತ್ರೀ ಪಾತ್ರಗಳನ್ನು ಆಧರಿಸಿದ ಚಿತ್ರಣಗಳೇ. ಈ ಧೋರಣೆಯನ್ನು ಗಮನಿಸಿದಾಗ ನಮಗೆ ಕಳೆದ ಶತಮಾನದ ಆರಂಭದ ದಿನದ ಸಾಮಾಜಿಕ ಕಾದಂಬರಿಗಳ ನೆನಪು ಬರುತ್ತದೆ. ಇಂದಿರಾ, ಇಂದಿರಾಬಾಯಿ, ವಾಗ್ದೇವಿ - ಮುಂತಾದ ಶೀರ್ಷಿಕೆಯ ಕಾದಂಬರಿಗಳು ಹೆಣ್ಣಿನ ವಸ್ತುವಿನ ಸುತ್ತಲೇ ರಚಿತವಾದವು. ವಸಹತು ಸಂಸ್ಕೃತಿಯ ನಡುವಿನಲ್ಲಿ ಕಾದಂಬರಿ ರಚಿಸಿದ ಲೇಖಕರಿಗೆ ಸ್ತ್ರೀ ಸುಧಾರಣೆ ಮುಖ್ಯ ಕಾಳಜಿಯಾಗಿತ್ತು. ಬ್ರಿಟಿಷರೆದುರಿಗೆ ತಮ್ಮ ಹೆಣ್ಣು ಮಕ್ಕಳನ್ನು ಉದ್ಧರಿಸುವ ತಮ್ಮ ಪ್ರಯತ್ನವನ್ನು ಸಾಬೀತುಗೊಳಿಸುವ ಅಗತ್ಯವೂ ಆ ಲೇಖಕರಿಗಿತ್ತು. ಅದೇನೆ ಇರಲಿ, ಆ ಲೇಖಕರಿಗೆ ಸ್ವಸ್ಥ್ಯ ಸಮಾಜದ ನಿರ್ಮಾಣದ ಕಲ್ಪನೆ ಮುಂದಿತ್ತು. ಅದಕ್ಕೆ 'ಹೆಣ್ಣು' ಪ್ರಮುಖ ಆಸಕ್ತಿಯ ವಿಷಯವಾಗಿದ್ದಳು.

ಆದರೆ ಇಂದು 'ಮಹಿಳೆ'ಯೇ ಕೇಂದ್ರೀಕೃತವಾಗಿರುವ ನಮ್ಮ ದೂರದರ್ಶನಗಳ ಮಾದರಿಗಳನ್ನು ಗಮನಿಸಿದಾಗ ನಿರಾಶೆ ಗಾಢವಾಗಿ ನಮ್ಮನ್ನು ಆವರಿಸುತ್ತದೆ. ಇತ್ತೀಚೆಗೆ ಸಶಕ್ತೀಕರಣದ ಮಾತು ಎಲ್ಲ ರಂಗಗಳಲ್ಲೂ ಹೆಚ್ಚಾಗಿ ಕೇಳಿ ಬರುತ್ತದೆ. ಹೀಗೆ ಸಶಕ್ತಳಾದ ಮಹಿಳೆ ಧಾರವಾಹಿಗಳಲ್ಲಿ ಹೇಗೆ ಚಿತ್ರಿತಳಾಗುತ್ತಾಳೆಂದರೆ ಅವಳ ಛಲ ಮತ್ತು ಸಾಧನೆಗಳೂ ಕೂಡ ಕೆಲವೊಮ್ಮೆ ನಗೆ ಪಾಟಲಿಗೆ ಗುರಿಯಾಗುತ್ತದೆ. ಐ.ಎ.ಎಸ್. ಓದುವ ಛಲ ಹೊತ್ತ 'ಪಾರ್ವತಿ'ಗೆ ಮಧ್ಯರಾತ್ರಿಯಲ್ಲಿ ಮನೆಬಿಟ್ಟು ಓಡಿ ಹೋಗಬಾರದೆಂಬ ಪ್ರಾಥಮಿಕ ತಿಳುವಳಿಕೆಯೂ ಇಲ್ಲ. ಹಾಗೆಯೇ ಕೇವಲ ಎಸ್.ಎಸ್.ಎಲ್.ಸಿ.ಯಷ್ಟೇ ಓದಿದ್ದರೂ ತನಗೆ ಅಪರಿಚಿತವಾದ ಸುತ್ತಮುತ್ತಲ ವ್ಯಾವಹಾರಿಕ ಜಗತ್ತನ್ನು ಸಂಭಾಳಿಸಲು ಹೇಗೆ ಸಾಧ್ಯವಾಯಿತು ಎಂಬುದಕ್ಕೆ ಸಾಕಷ್ಟು ಪುರಾವೆಗಳಿಲ್ಲ. ಮತ್ತೊಬ್ಬ ನಾಯಕಿ ಭಾಗೀರಥಿ ಶಾಲಾ ಶಿಕ್ಷಣ ಮಾತ್ರ ಹೊಂದಿದ್ದರೂ ದೊಡ್ಡ ಉದ್ಯಮಪತಿಯಾಗುತ್ತಾಳೆ. ಮುಖ್ಯವಾಗಿ ಎಸ್. ನಾರಾಯಣ ಅವರು ನಿರ್ದೇಶಿಸುವ ಧಾರಾವಾಹಿಗಳ ಮುಖ್ಯ ಸೂತ್ರ ಇದು. ಶಾಲಾ ಶಿಕ್ಷಣ ಮಾತ್ರವಿದ್ದರೂ ಸಾಕು, ಛಲ ಮತ್ತು ಪರಿಶ್ರಮವಿದ್ದರೆ ಅವರು ದೊಡ್ಡ ಅಧಿಕಾರಿಗಳು, ಉದ್ಯಮಪತಿಗಳೂ ಆಗಿ ಸಶಕ್ತ ಮಹಿಳೆಯ ಮಾದರಿಗಳಾಗುತ್ತಾರೆ. ಅಷ್ಟೇ ಅಲ್ಲ ಅವರು ಸಹನೆ, ಔದಾರ್ಯತೆಯ ಮಹಾಪೂರವನ್ನೇ ಹರಿಸುತ್ತಾರೆ. ನಮ್ಮ ಸಮಾಜ ಸಾಂಪ್ರದಾಯಿಕವಾಗಿ ನಿಗಧಿ ಪಡಿಸಿರುವ ಎಲ್ಲ ಗುಣ ಸ್ವಭಾವಗಳನ್ನೂ ಈ ಸ್ತ್ರೀ ಪಾತ್ರಗಳಿಗೆ ಆರೋಪಿಸಿ ಅದ್ಭುತ ಹೀರೋಯಿನ್‌ಗಳಾಗಿ ಅವರನ್ನು ರೂಪಿಸುತ್ತಾರೆ.

ಸಾಮಾಜಿಕ ಸಮಸ್ಯೆಗಳು ಈ ಧಾರಾವಾಹಿಗಳಲ್ಲಿ ಸಾಮಾಜಿಕ ಮಾನ್ಯತೆಯನ್ನು ಪಡೆದು ಒಪ್ಪಿತ ಮೌಲ್ಯಗಳಾಗಿ ಬಿಡುವುದು ಮತ್ತೊಂದು ವಿಶೇಷ. ಗಂಡಂದಿರ ಎರಡನೇ ಸಂಬಂಧಗಳು ಇಲ್ಲಿ ಸರ್ವೇ ಸಾಮಾನ್ಯ. ಅಷ್ಟೇ ಅಲ್ಲ ಅವುಗಳಿಗೆ ತಾರ್ಕಿಕ ವಿಶ್ಲೇಷಣೆಯೂ ಇರುತ್ತದೆ. ಅಪ್ಪನ ಇಚ್ಛೆಗೆ ವಿರುದ್ಧವಾಗಿ ಮದುವೆಯಾದ ಪಾರ್ವತಿಯ ಗಂಡ, ತನ್ನ ಮೊದಲ ಸಂಬಂಧದ ವಿಷಯ ತಿಳಿದು ಅವನನ್ನು ಬಿಟ್ಟು ಹೋದ ಹೆಂಡತಿಯ ಹಿಂದೆಯೇ ಹಿಂಬಾಲಿಸಿ ಹೋಗಿ ತನ್ನ ಹಕ್ಕು ಸ್ಥಾಪಿಸುವುದು ಒಂದು ಅತಿಯಾದರೆ,

ಕಾವ್ಯಾಂಜಲಿಯ ನಾಯಕಿ ಕಾವ್ಯ ತನ್ನ ಗಂಡನ ಶುಶ್ರುಷೆ ಮಾಡಿದ ದಾದಿಯನ್ನು ಅವಳ ಗಂಡನಿಗೆ ಮದುವೆ ಮಾಡಿಸುವುದು ಮತ್ತೊಂದು ಅತಿರೇಕ. ಹೀಗೆ ಕಾನೂನು ಬಾಹಿರವಾದ ಸಂಬಂಧಗಳು ಈ ಧಾರಾವಾಹಿಗಳಲ್ಲಿ ಹೇರಳವಾಗಿ ಸಿಕ್ಕುತ್ತವೆ.

ಈ ಧಾರಾವಾಹಿಗಳ ನಾಯಕಿಯರು ಮಹಿಳಾ ಹಕ್ಕುಗಳ ಹೋರಾಟಗಾರ್ತಿಯರೂ ಕೂಡ. ಆದರೆ ಅವರ ಹೋರಾಟದ ಪರಿ ಕೆಲವೊಮ್ಮೆ ದಿಕ್ಕು ತಪ್ಪಿಸುವಂತಹುದು. 'ಭಾಗೀರಥಿ'ಯ ಭಾಗೀರಥಿಯ ಮುಖ್ಯ ಜೀವನೋದ್ದೇಶವೇ ಎಲ್ಲರಿಗೂ ಕೌನ್ಸಿಲಿಂಗ್ ಮಾಡುವುದು. ಹೆಣ್ಣಿಗೆ ಅನ್ಯಾಯಮಾಡುವವನು ಅಪ್ಪನಿರಲಿ, ಗಂಡನಿರಲಿ ತನ್ನ ಭಂಟರನ್ನು ಕಳುಹಿಸಿ ಅವರನ್ನು ಒದ್ದು ಕರೆದುಕೊಂಡು ಬಂದು ಬುದ್ದಿ ಕಲಿಸುತ್ತಾಳೆ. ಇಲ್ಲವೇ ತಾನೇ ಕೆನ್ನೆಗೆ ನಾಲ್ಕು ಬಾರಿಸಿ ಬುದ್ದಿ ಕಲಿಸುತ್ತಾಳೆ. ಯಾರಾದರೂ ಬಂದು ಕಾಯಿಲೆ, ತಾಪತ್ರಯಗಳನ್ನು ಹೇಳಿಕೊಂಡರೆ ತನ್ನ ಪರ್ಸಿನಿಂದ ಸಾವಿರ, ಸಾವಿರ ರೂಗಳನ್ನು ಹಂಚಿಬಿಡುತ್ತಾಳೆ. ಒಟ್ಟಿನಲ್ಲಿ ಈ ಮಹಿಳಾ ನಾಯಕಿಗೆ ಸಂಘಟಿತ ಶಕ್ತಿಗಿಂತ, ತನ್ನ ಭಂಟರು, ರೌಡಿಗಳಲ್ಲೇ ಹೆಚ್ಚು ನಂಬಿಕೆ, ವಿಶ್ವಾಸ, ಜಾಗೃತಿಯ ಮಾತುಗಳು ನುಡಿಮುತ್ತುಗಳಾಗುತ್ತವೆಯೇ ಹೊರತು ಪರಿಸರದ ಬದಲಾವಣೆಯ ಗಾಳಿಯಾಗಿ ಮೂಡಿಬರುವುದಿಲ್ಲ. ಆದ್ದರಿಂದಲೇ ಬಹುಪಾಲು ಪುರುಷ ನಿರ್ದೇಶಿತ ನಿರ್ಮಿಸಲ್ಪಟ್ಟ ಈ ಧಾರಾವಾಹಿಗಳು ಮಹಿಳಾ ಚಳುವಳಿಯ ದಿಕ್ಕುತಪ್ಪಿಸುವ ಸಂದರ್ಭಗಳೇ ಹೆಚ್ಚು.

ಇತ್ತೀಚಿನ ಧಾರಾವಾಹಿಗಳಲ್ಲಿ ಮಹಿಳಾ ವಿಲನ್‌ಗಳೇ ಹೆಚ್ಚು. ಅವರ ವೇಷ, ವರ್ತನೆ, ಚಿತ್ರಣ, ಎಲ್ಲವೂ ಅಸಹಜ. ತಿಂಡಿಪೋತಿ ಅಜ್ಜಿಯರು, ಅಸೂಯಾಪರ ಸಂಕುಚಿತ ಅತ್ತೆಯರು, ಕೊನೆಗೆ ಸೋದರಿ, ಗೆಳತಿಯರೂ ಕೂಡ ಶತ್ರುಗಳೇ ಆಗಿ ಬಿಡುವ ಪಾತ್ರಗಳ ಹಿಂದೆ 'ಹೆಣ್ಣಿಗೆ ಹೆಣ್ಣೇ ಶತ್ರು' ಎಂಬುದನ್ನು ನಂಬಿಸುವ ಪ್ರಯತ್ನವಿದೆಯೇ ಎಂಬ ಗುಮಾನಿ ಹುಟ್ಟುತ್ತದೆ. ಸಮಾಜ ನಿರೀಕ್ಷಿಸುವ ಸ್ತ್ರೀ ಸಹಜ ಗುಣಗಳೆನ್ನಲಾದ ತ್ಯಾಗ, ಕರುಣೆ, ಸಹನೆಯೇ ಮುಂತಾದ ಗುಣಗಳ ಬದಲಿಗೆ ಈ ಮಹಿಳಾ ವಿಲನ್‌ಗಳು ಅಹಂಕಾರ, ಕ್ರೌರ್ಯ, ಅವಿವೇಚನೆಯ ಮೊಟ್ಟೆಗಳಾಗಿ ಕಿರಾತಕರಂತೆ ಚಿತ್ರಿತರಾಗಿದ್ದಾರೆ. ಅಂದರೆ ಕುಟುಂಬದಲ್ಲಿ, ಸಾರ್ವಜನಿಕ ಜೀವನದಲ್ಲಿ ಸಶಕ್ತರೆನಿಸಿಕೊಂಡ ಮಹಿಳೆಯರೂ ಕೂಡ 'ಸ್ತ್ರೀ ಸಹಜ ಗುಣ'ಗಳಿಗೆ ಹೊರತಾದರೆ ಯಶಸ್ವೀ ಮಹಿಳೆಯರೆನಿಸಿಕೊಳ್ಳುವುದಿಲ್ಲವೆಂಬ ಸಂದೇಶವನ್ನೂ ಇವು ಕೊಡುತ್ತವೆ.

ಮಹಿಳೆಯ ಯಶಸ್ಸು ಎಲ್ಲಿ ಅಡಗಿದೆ? ಈ ಧಾರಾವಾಹಿಗಳು ಕಾಣಿಸುವ ಹೆಣ್ಣಿನ ಯಶಸ್ಸು ಬಹುಮುಖ್ಯವಾಗಿ ಅವರ ತ್ಯಾಗದಲ್ಲಿ, ನಂತರ ವಿವಾಹದಲ್ಲಿ, ಕೊನೆಗೆ ತಾಯ್ತನದಲ್ಲಿ. ಹೊಸ ವಿಚಾರಗಳ, ಹೊಸ ಮಾದರಿಯ ಹೆಣ್ಣನ್ನು ಊಹಿಸಲು ಸಾಧ್ಯವಿಲ್ಲದ ಪುರುಷಗ್ರಹಿಕೆಗೆ ನಿಜವಾದ ಸಶಕ್ತ ಮಹಿಳೆಯನ್ನು ಕಲ್ಪಿಸಿಕೊಳ್ಳುವುದು, ಅರಗಿಸಿಕೊಳ್ಳುವುದು ಕಷ್ಟವೆನಿಸುತ್ತದೆ.

ದೂರದರ್ಶನದ ಖಾಸಗಿ ಮತ್ತು ಸರ್ಕಾರಿ ಚಾನೆಲ್‌ನ ಎಲ್ಲ ಧಾರಾವಾಹಿಗಳ ಪ್ರಾಯೋಜಕರೂ ದೊಡ್ಡ ದೊಡ್ಡ ಹಣಕಾಸಿನ ವ್ಯವಹಾರದ ಕಂಪೆನಿಗಳು ಮತ್ತು ಬಹುರಾಷ್ಟ್ರೀಯ ಕಂಪೆನಿಗಳೇ ಆದ್ದರಿಂದ ಅವರ ಗ್ರಾಹಕರ ಅಭಿರುಚಿಗೆ, ಅಗತ್ಯಕ್ಕೆ ತಕ್ಕಂತಹ ಕಾರ್ಯಕ್ರಮಗಳೇ ಆದ್ಯತೆ ಪಡೆಯುತ್ತವೆ. ಆದರೆ ಟಿ.ವಿ. ನೋಡುಗರು ಮಾತ್ರ ಬಂಗಲೆಯಲ್ಲಿನ ಜನರಿಂದ ಹಿಡಿದು ಗುಡಿಸಿಲಿನ, ನಗರಪ್ರದೇಶದ ಜನರಿಂದ ಹಿಡಿದು ಗ್ರಾಮೀಣ ಪ್ರದೇಶಗಳ ಜನ ಸಮೂಹದವರೆಗೂ ವ್ಯಾಪಿಸಿರುವುದರಿಂದ ದೂರದರ್ಶನ ಪ್ರಭಾವದ ಬಗ್ಗೆ ಚಿಂತಿಸುವಂತೆ ಮಾಡುತ್ತದೆ. ಅವಿದ್ಯಾವಂತರಿರಲಿ, ವಿದ್ಯಾವಂತ, ಸುಶಿಕ್ಷಿತ ಸ್ತ್ರೀ ಪುರುಷರಿಬ್ಬರೂ ದೂರದರ್ಶನದ ಧಾರಾವಾಹಿಗಳ ವಸ್ತುಗಳನ್ನು ಗಂಭೀರವಾಗಿ ಚರ್ಚಿಸುವುದನ್ನು ಗಮನಿಸಿದಾಗ ಟಿ.ವಿ.ಯ ಯಾಜಮಾನ್ಯತೆಯ ಅರಿವಾಗುವುದು. ಒಂದು ಚಿಕ್ಕ ಎಳೆಯ ವಿಚಾರ, ಒಂದು ಮುಷ್ಟಿಯ ಜನರ ಆಚಾರ, ನಂಬಿಕೆಗಳನ್ನು ಸರ್ವಮಾನ್ಯವೆಂಬಂತೆ ಒತ್ತಾಯಿಸುವ ಈ ಸಮೂಹ ಮಾಧ್ಯಮದ ಶಕ್ತಿ ಬೆರಗುಗೊಳಿಸುವುದಷ್ಟೇ ಅಲ್ಲದೆ, ದುಃಖ ಪಡುವಂತೆಯೂ ಮಾಡುತ್ತದೆ.

ಈ ಚರ್ಚೆಗಳೇನೇ ಇರಲಿ, ಇಂದಿನ ಹೆಣ್ಣು ತನ್ನ ಬಂಧನದ ನೆಲೆಗಳನ್ನು ಕಳಚಿಕೊಳ್ಳುವ ಪ್ರಯತ್ನದಲ್ಲಿ ಚಿಕ್ಕದಾದರೂ ಹೋರಾಟದಲ್ಲಿ ತೊಡಗಿದ್ದಾಳೆ. ಬೆಳಕಿನ ದಿಕ್ಕಿಗೆ ಮುಖ ಮಾಡಿದ್ದಾಳೆ. ತನ್ನದೇ ಸಂಸ್ಕೃತಿಯ, ಮೌಲ್ಯಗಳ ಶೋಧನೆಯಲ್ಲಿ ತೊಡಗಿದ್ದಾಳೆ. ಈ ಅಂಶಗಳನ್ನು ಸಮೂಹಮಾಧ್ಯಮಗಳು, ಕಲೆ ಸಾಹಿತ್ಯಗಳು ಗಮನಿಸಿ ದಾಖಲಿಸದೆ ಅವಾಸ್ತವ ಮತ್ತು ವಿಕೃತ ಚಿತ್ರಣಗಳಲ್ಲಿ ತೃಪ್ತಿ ಪಟ್ಟುಕೊಂಡರೆ, ಅದು ಹೆಚ್ಚು ಕಾಲ ಚಲಾವಣೆಯಲ್ಲಿರುವುದಿಲ್ಲ. ಅಷ್ಟೇ ಅಲ್ಲ ಮಹಿಳಾ ಚಳುವಳಿ ಇದನ್ನು ಗಂಭೀರವಾಗಿ ಪರಿಗಣಿಸಬೇಕಾದ ತುರ್ತು ಉದ್ಭವಿಸುತ್ತದೆ. ಇದರ ಸಾಧ್ಯತೆಯನ್ನು ದೂರದರ್ಶನದ ಸಾಹಿತ್ಯ ಬರೆಯುವವರು, ಚಿತ್ರ ನಿರ್ಮಿಸುವವರು ಗಂಭೀರವಾಗಿ ಪರಿಗಣಿಸಬೇಕಾಗಿದೆ.

- ಎನ್. ಗಾಯತ್ರಿ

ಸ್ತ್ರೀ ಶಿಕ್ಷಣ

-ಬೇಗಂ ರೋಕೇಯಾ

ಬೇಗಂ ರೋಕೇಯ (1980 / 1932) ಜನ್ಮ ಈಗಿನ ಬಾಂಗ್ಲಾ ದೇಶದ ರಂಗ್‌ಪುರ್‌ನಲ್ಲಿ ಪತಿಯ ಮರಣದ ನಂತರ ಕಲ್ಕತ್ತಾಗೆ ಬಂದು ಸ್ತ್ರೀ ಶಿಕ್ಷಣದ ಉನ್ನತಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು ನಾನಾ ವಿಷಯಗಳ ಮೇಲೆ, ಮುಖ್ಯವಾಗಿ ಸ್ತ್ರೀ ಶಿಕ್ಷಣದ ಬಗ್ಗೆ ಅನೇಕ ಗ್ರಂಥಗಳನ್ನು, ಲೇಖನಗಳನ್ನೂ ಬರೆದಿದ್ದಾರೆ.

ಇಲ್ಲಿ ಅವರು ವಂಗೀಯ ನಾರಿ ಶಿಕ್ಷಾ ಸಮಿತಿಯ ಒಂದು ಸಭೆಯಲ್ಲಿ ಮಾಡಿದ ಅಧ್ಯಕ್ಷ ಭಾಷಣದ ಅನುವಾದವನ್ನು ನೀಡಲಾಗಿದೆ. ಬಂಗಾಳಿಯಲ್ಲಿನ ಈ ಲೇಖನವನ್ನು ಕನ್ನಡಕ್ಕೆ ಕಲ್ಕತ್ತೆಯ ಶ್ರೀ ಜಿ. ಕುಮಾರಪ್ಪ ಅನುವಾದಿಸಿಕೊಟ್ಟಿದ್ದಾರೆ.

ಪ್ರೀತಿಯ ಅಕ್ಕ ತಂಗಿಯರೆ,

ನನ್ನಂತಹ ಸಾಮಾನ್ಯ ಈ ದಿನದ ಸಭೆಗೆ ಅಧ್ಯಕ್ಷಳನ್ನಾಗಿ ಮಾಡಿ, ತಮ್ಮ ಪ್ರೀತಿಯನ್ನು ನನಗೆ ತೋರಿಸಿದ್ದೀರಿ ಇದಕ್ಕಾಗಿ ನಾನು ಕೃತಜ್ಞಳು ಅದಾಗ್ಯೂ ನಿಮ್ಮ ಈ ಆಯ್ಕೆ ಸರಿಯಾದುದಲ್ಲ ಎಂದು ನಾನು ಹೇಳಬಯಸುತ್ತೇನೆ. ಏಕೆಂದರೆ ಇಡೀ ಜೀವಮಾನವನ್ನೆಲ್ಲ ನಾನು ಕಠೋರ ಸಾಮಾಜಿಕ ಕಟ್ಟುಪಾಡುಗಳ ಪರದೆಯ ಹಿಂದೆ - ಕಬ್ಬಿಣದ ಪೆಟ್ಟಿಗೆಯಲ್ಲಿವಂತೆ ಬಂಧಿಯಾಗಿ ಕಳೆದಿದ್ದೇನೆ. ಸಮಾಜದೊಂದಿಗೆ ಸರಿಯಾದ ರೀತಿಯಲ್ಲಿ ಸೇರಿಹೋಗಲು ನನಗೆ ಸಾಧ್ಯವಾಗಿಲ್ಲ, ಇಂತಹ ಸಭೆಗಳಲ್ಲಿ ಹೇಗೆ ಮಾತನಾಡಬೇಕೆನ್ನುವುದೂ ನನಗೆ ತಿಳಿಯದು ಆದುದರಿಂದ ನನ್ನ ಭಾಷಣದಲ್ಲಿ ತಪ್ಪು ಒಪ್ಪುಗಳು ಉಂಟಾಗಬಹುದು.

ಮುಸ್ಲಿಂ ಬಾಲಕಿಯ ಶಿಕ್ಷಣದಲ್ಲಿ ಇರುವ ಅಡ್ಡಿ ಆತಂಕಗಳನ್ನು ಕುರಿತು ಮಾತನಾಡಬೇಕೆಂದು ಮಿಸೆಸ್ ಲಿಂಡ್ಸೆ ನನ್ನನ್ನು ಕೇಳಿಕೊಂಡಿದ್ದಾರೆ. ಇಲ್ಲಿ ಉಪಸ್ಥಿತರಿರುವ ಸುಶಿಕ್ಷಿತ ಗ್ರಾಜುಯೇಟ್ ಮಹಿಳೆಯರ ಎದುರು ಈ ವಿಷಯದ ಬಗ್ಗೆ ಹೇಳುವ ಶಕ್ತಿ ನನ್ನಲ್ಲಿಲ್ಲ. ಆದರೂ ಕಳೆದ 20-21 ವರ್ಷಗಳಿಂದಲೂ ನಾನು ಸಾಹಿತ್ಯ ಮತ್ತು ಸಮಾಜ ಸೇವೆ ಮಾಡಿಕೊಂಡಿದ್ದೇನೆ ಮತ್ತು ಕಳೆದ 16 ವರ್ಷಗಳಿಂದಲೂ ಸಖಾವತ್ ಮೆಮೋರಿಯಲ್ ಗರ್ಲ್ಸ್ ಸ್ಕೂಲನ್ನು ನಡೆಸುತ್ತಿರುವ ಅಷ್ಟೋ ಇಷ್ಟೋ ಅನುಭವವನ್ನು ನಿಮ್ಮೆದುರು ಇಡುವ ಪ್ರಯತ್ನ ಮಾಡುತ್ತಿದ್ದೇನೆ.

ಸ್ತ್ರೀ ಶಿಕ್ಷಣದ ಬಗ್ಗೆ ಮಾತನಾಡಬೇಕೆಂದರೆ ನಮ್ಮ ಸಾಮಾಜಿಕ ಪರಿಸ್ಥಿತಿಯ ಬಗ್ಗೆ ಮಾತನಾಡಬೇಕಾಗುತ್ತದೆ. ಸಾಮಾಜಿಕ ಪರಿಸ್ಥಿತಿಯ ಬಗ್ಗೆ ಮಾತನಾಡಬೇಕೆಂದರೆ ಹೆಣ್ಣಿನ ಬಗ್ಗೆ ನಮ್ಮ ಮುಸಲ್ಮಾನ ಸೋದರರ ಅವಹೇಳನ, ಅಸಡ್ಡೆ, ಅನುದಾರತೆ ಮತ್ತು ಉದಾಸೀನತೆಗಳನ್ನು ಗಮನಿಸುವುದು ಅನಿವಾರ್ಯವಾಗುತ್ತದೆ. ಈಗಿರುವ ಪ್ರಶ್ನೆಯೆಂದರೆ ಮುಸ್ಲಿಂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ದಾರಿ ಯಾವುದು? ಅಲ್ಲಾಹ್‌ನ ಕೃಪೆಯಿಂದ ಅನೇಕ ದಾರಿಗಳೇನೋ ಇವೆ. ಆದರೆ ಈ ಅಭಾಗಿನಿಯರು ಅವುಗಳ ಫಲವನ್ನೂ ಪಡೆಯಬಲ್ಲರೆ? ನಾನು ಕಳೆದ ಇಪ್ಪತ್ತೆರಡು ವರ್ಷಗಳಿಂದಲೂ ಎಲ್ಲರಿಂದಲೂ ತಿರಸ್ಕಾರಕ್ಕೆ ಒಳಗಾದ ಜೀವವೊಂದಕ್ಕಾಗಿ ಮರುಗುತ್ತಿದ್ದೇನೆ ಎಂದು ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ಯಾವುದು ಆ ಜೀವ? ಆ ಜೀವ ಬೇರಾವುದೂ ಅಲ್ಲ, ಅದು ಭಾರತೀಯ ನಾರಿ. ಈ ಜೀವಕ್ಕಾಗಿ ಯಾರೂ, ಎಂದೂ ಮರುಗಿಲ್ಲ. ಅಸ್ಪೃಷ್ಯರ ದುಃಖವನ್ನು ಕಂಡು ಗಾಂಧೀಜಿಯವರು ವಿಚಲಿತರಾಗಿದ್ದರು. ಸ್ವತಃ ಥರ್ಡ್ ಕ್ಲಾಸ್ ರೈಲಿನಲ್ಲಿ ಪ್ರಯಾಣ ಮಾಡಿ, ರೈಲು ಪ್ರಯಾಣಿಕರ ಕಷ್ಟವನ್ನು ಅರ್ಥಮಾಡಿಕೊಂಡಿದ್ದರು. ಪಶುಗಳ ಬಗ್ಗೆ ಗಮನಹರಿಸಲು ಜನರಿದ್ದಾರೆ. ಹೀಗಾಗಿಯೇ ಎಲ್ಲೆಂದರಲ್ಲಿ ಪಶು ಉದ್ಧಾರ ಸಮಿತಿಗಳನ್ನು ಕಾಣಬಹುದು. ರಸ್ತೆಯ ಮೋಟಾರು ಗಾಡಿಯ ಚಕ್ರಕ್ಕೆ ಸಿಕ್ಕು ಒಂದು ನಾಯಿ ಸತ್ತರೆ, ಮಾರನೆಯ ದಿನ ಆ್ಯಂಗ್ಲೋ ಇಂಡಿಯನ್ ಪತ್ರಿಕೆಗಳಲ್ಲಿ ಶೋಕ ಸಮಾಚಾರ ಪ್ರಕಟವಾಗುತ್ತದೆ. ಆದರೆ ನಮ್ಮಂತೆ ಕಷ್ಟಗಳ ಸರಮಾಲೆಯಲ್ಲಿ ಬಂಧಿಯಾಗಿರುವ ನಾರಿಯರಿಗಾಗಿ ಅಳುವವರು ಈ ಭಾರತದಲ್ಲಿ ಒಬ್ಬರೂ ಇಲ್ಲ.

ನಾರಿ - ಪುರುಷ ಸಮಾಜ ಎನ್ನುವ ದೇಹದ ಎರಡು ಅಂಗಗಳು. ಅನಾದಿ ಕಾಲದಿಂದಲೂ ಪುರುಷನು ಸ್ತ್ರೀಯನ್ನು ಶೋಷಿಸುತ್ತಲೇ ಬಂದಿದ್ದಾನೆ ಮತ್ತು ಸ್ತ್ರೀ ಅದನ್ನು ಮೂಕಳಾಗಿ ಸಹಿಸುತ್ತಲೇ ಬಂದಿದ್ದಾಳೆ. ಒಂದು ಸಂತೋಷದ ವಿಚಾರವೆಂದರೆ, ಇಷ್ಟು ಕಾಲದ ನಂತರ ಶ್ರೀ ಕೃಷ್ಣನು ಸ್ವಯಂ ನಮ್ಮ ಹಿಂದೂ ಭಗಿನಿಯತ್ತ ತನ್ನ ಕೃಪಾಕಟಾಕ್ಷ ಬೀರಿದ್ದಾನೆ. ಹೀಗಾಗಿಯೇ ದೇಶದ ಎಲ್ಲೆಡೆಯಲ್ಲಿಯೂ ಹಿಂದೂ ನಾರಿಯರಲ್ಲಿ ಜಾಗೃತಿ ಹುಟ್ಟಿಕೊಳ್ಳುತ್ತಿವೆ. ಅವರು, ಮುಖ್ಯವಾಗಿ ಮದ್ರಾಸಿನ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ಧಿಯ ಹಾದಿಯನ್ನು ತುಳಿಯುತ್ತಿದ್ದಾರೆ. ಮದ್ರಾಸಿನ ಲೆಜಿಸ್ಲೇಟರ್ ಕೌನ್ಸಿಲ್‌ನ ಡೆಪ್ಯುಟಿ ಪ್ರೆಸಿಡೆಂಟ್ ಪದವಿಗೆ ಈ ಬಾರಿ ಒಬ್ಬ ಮಹಿಳೆಯು ಆಯ್ಕೆಯಾಗಿದ್ದಾರೆ. ರಂಗೂನ್‌ನಲ್ಲಿ ಒಬ್ಬರು ಬ್ಯಾರಿಸ್ಟರ್ ಆಗಿದ್ದಾರೆ. ಲೇಡಿ ಬ್ಯಾರಿಸ್ಟರ್ ವಿ.ಎಸ್. ಸೊರಬ್‌ಜಿಯವರಂತೂ ಸುಪ್ರಸಿದ್ಧರು. ಆದರೆ ಮುಸ್ಲಿಂ ನಾರಿಯರ ವಿಚಾರವಾಗಿ ಏನು ಹೇಳಲಿ?

ತನ್ನ ಮಗುವಿಗೆ ತಾಯಿ ವಿಷವ ನೀಡಿದರೆ
ತನ್ನ ಮಗುವನ್ನು ತಂದೆ ಮಾರಿಬಿಟ್ಟರೆ
ರಕ್ಷಿಸುವರು ಯಾರು?

ಆಲಿಘರ್‌ನ ಉಚ್ಚಬಾಲಿಕಾ ವಿದ್ಯಾಲಯದ ಸೆಕ್ರೇಟರಿ ಶೇಕ್ ಮಹಮ್ಮದ್ ಅಬ್ದುಲ್ಲಾ ಸಾಹೇಬರು ತಮ್ಮ ಭಾಷಣದಲ್ಲಿ ಒಮ್ಮೆ ''ಈ ದೇಶದಲ್ಲಿ ಬಾಲಕ - ಬಾಲಕಿಯರ ಶಿಕ್ಷಣದಲ್ಲಿ ಅಂತರ ಇರಿಸಿರುವ ಕಾರಣದಿಂದಾಗಿಯೇ ನಮ್ಮ ಪರಿಸ್ಥಿತಿ ಇಂತಹ ಶೋಚನೀಯ ಸ್ಥಿತಿಯನ್ನು ಮುಟ್ಟಿದೆ. ನಾರಿಯರಿಗೆ ನಾವು ಶಿಕ್ಷಣ ನೀಡದೆ ಇರುವುದು ನಮಗೆ ಹೆಮ್ಮೆಯ ವಿಷಯವೇನೂ ಅಲ್ಲ. ಬದಲಾಗಿ ಅದೊಂದು ಕಳಂಕ'' ಎಂದು ಹೇಳಿದ್ದರು.

ಅಂದರೆ 20 ವರ್ಷಗಳ ಹಿಂದೆ ನಾನು ನನ್ನ 'ಮತಿ ಚೂರೆ' ಗ್ರಂಥದ ಮೊದಲ ಭಾಗದಲ್ಲಿ ಹೇಳಿರುವುದನ್ನೂ ಈಗ ಶೇಕ್ ಸಾಹೇಬರಂತಹ ಜ್ಞಾನ ವೃದ್ಧರ ಬಾಯಿಂದ ಕೇಳಿದೆನು. ಒಂದು ಕಾಲದಲ್ಲಿ ಅರಬರು ಕನ್ಯಾವಧೆ ಮಾಡುತ್ತಿದ್ದರು. ಇಸ್ಲಾಂ ಧರ್ಮ ಕನ್ಯೆಯರ ಶಾರೀರಿಕ ಹತ್ಯೆಯನ್ನು ಖಂಡಿಸುತ್ತದೆ. ಆದುದರಿಂದಲೇ ಈಗಿನ ಮುಸ್ಲಿಂ ಸಮುದಾಯವು ಎಷ್ಟೂ ವೇದನೆಗೊಳ್ಳದೆ ನಾರಿಯರ ಮನಸ್ಸು, ಮಸ್ತಿಷ್ಕ ಮತ್ತು ಅವರ ಬುದ್ಧಿಮತ್ತತೆಗಳನ್ನು ವಧಿಸುತ್ತಿದೆ. ಇದು ಈಗಲೂ ಸಹ ಅಡೆತಡೆ ಇಲ್ಲದೆ ನಡೆಯುತ್ತಿದೆ. ನಾರಿಯನ್ನೂ ಪ್ರಾಣಿಗಳಂತೆ ಬಂಧಿಸಿ ಇರಿಸಿ, ಜ್ಞಾನ ಮತ್ತು ವಿವೇಕಗಳಿಂದ ಅವರನ್ನು ದೂರ ಇರಿಸುವುದು ಕುಲೀನರ ಲಕ್ಷಣ ಎಂದು ಭಾವಿಸಲಾಗುತ್ತಿದೆ.

ಕೆಲವು ಕಾಲದವರೆಗೆ ಈಜಿಪ್ಟ್ ಮತ್ತು ಟರ್ಕಿ ದೇಶಗಳು ನಾರಿಯರ ಶಿಕ್ಷಣ ವಿರೋಧಗಳಾಗಿದ್ದವು. ಆದರೆ ಈಗ ಆ ದೇಶಗಳು ತಮ್ಮ ತಪ್ಪನ್ನೂ ಅರ್ಥಮಾಡಿಕೊಂಡು ಸರಿಯಾದ ದಾರಿಯಲ್ಲಿ ಸಾಗುತ್ತಿವೆ. ಯೂರೋಪು ಮತ್ತು ಅಮೇರಿಕಾಗಳಂತೆ ಈ ಎರಡೂ ದೇಶಗಳ ಬಾಲಕ ಮತ್ತು ಬಾಲಕಿಯರಿಗೆ ಸಮಾನ ಶಿಕ್ಷಣ ನೀಡುವುದು ಕಡ್ಡಾಯ ಎನ್ನುವ ಕಾನೂನನ್ನು ಜಾರಿಗೆ ತಂದಿವೆ. ಹೀಗೆ ಕಾನೂನನ್ನು ಜಾರಿ ಮಾಡುವ ಮೂಲಕ ಈ ದೇಶಗಳು ಧರ್ಮಶಾಸ್ತ್ರದ ಉಲಂಘನೀಯ ಆದೇಶವೊಂದರ ಪಾಲನೆ ಮಾಡಿದ್ದಾವಷ್ಟೇ. ನಮ್ಮ ಕಸೂಲ್ ಮಕ್ಬೂಲ್ (ಅಂದರೆ ಮಹಮ್ಮದ್ ಪೈಗಂಬರ್) ಜಗತ್ತಿನಲ್ಲಿ ಮೊಟ್ಟಮೊದಲ ಬಾರಿಗೆ ಸ್ತ್ರೀ - ಪುರುಷರಿಗೆ ಸಮಾನ ರೀತಿಯ ಶಿಕ್ಷಣ ದಾನಮಾಡುವ ಕರ್ತವ್ಯದ ಬಗ್ಗೆ ನಿರ್ದೇಶನ ನೀಡಿದ್ದಾರೆ. ಶಿಕ್ಷಣ ಪಡೆಯುವುದು ಎಲ್ಲ ನರನಾರಿಯರ ಅವಶ್ಯಕ ಕರ್ತವ್ಯ ಎಂದು ಅವರು ಆದೇಶ ನೀಡಿದ್ದಾರೆ. ಶಿಕ್ಷಣ ನೀಡುವುದನ್ನು ಕಡ್ಡಾಯ ಎನ್ನುವ ಕಾನೂನನ್ನು ಸಾವಿರದ ಮುನ್ನೂರು ವರ್ಷಗಳ ಹಿಂದೆಯೇ ನಮಗಾಗಿ ಮಾಡಲಾಗಿದೆ. ಆದರೆ, ದುಃಖದ ವಿಷಯವೆಂದರೆ ನಮ್ಮ ಸಮಾಜ ಅದನ್ನು ಇನ್ನೂ ಪಾಲಿಸುತ್ತಿಲ್ಲ.

ಆದರೆ ಸಮಾಜ ಇದರ ವಿರುದ್ಧಾಚರಣೆಯನ್ನೇ ಮಾಡುತ್ತಿದೆ ಮತ್ತು ಇದೇ ವಂಶಗೌರವ ಎಂದು ನಂಬಿದೆ. ನನ್ನ ಬಳಿ ನನ್ನ ವಿದ್ಯಾರ್ಥಿನಿಯರ ಪೋಷಕರು ಬರೆದಿರುವ ಅನೇಕ ಪತ್ರಗಳಿವೆ. ''ನಮ್ಮ ಹೆಣ್ಣು ಮಕ್ಕಳಿಗೆ 20ರಷ್ಟು ಉರ್ದು ಮತ್ತು ಕೊರಾನ್ ಶರೀಫ್ ಓದಲು ಬರುವಷ್ಟು ಓದು ಕಲಿಸಿದರೆ ಸಾಕು. ಬೇರೆ ಯಾವ ವಿದ್ಯೆಯೂ, ಮುಖ್ಯವಾಗಿ ಇಂಗ್ಲೀಷ್ ಶಿಕ್ಷಣ ಬೇಡವೇ ಬೇಡ'' ಎಂದು ಅವರು ಆ ಪತ್ರಗಳಲ್ಲಿ ಬರೆದಿದ್ದಾರೆ. ಇದು ನಮ್ಮ ಸಾಮಾಜಿಕ ಪರಿಸ್ಥಿತಿ.

ಭಾರತದಲ್ಲಿ ಸ್ತ್ರೀ ಶಿಕ್ಷಣ ಕಡ್ಡಾಯ ಎನ್ನುವ ಕಾನೂನು ಯಾವಾಗ ಜಾರಿಗೆ ಬರುತ್ತದೋ ಆಗ ಮುಂದಿನದನ್ನು ಗಮನಿಸುವಾ. ಆದರೆ ಈಗಿನ ಪ್ರಶ್ನೆ ಎಂದರೆ, ಮುಸಲ್ಮಾನರು - ಪೈಗಂಬರ ಹೆಸರಿಗಾಗಿ ಅಥವಾ ಹಾಳಾದ ಮಸೀದಿಯ ಒಂದು ಇಟ್ಟಿಗೆಯ ತುಂಡಿಗೆ ಆದ ಅವಮಾನಕ್ಕಾಗಿ ಪ್ರಾಣದ ಬಲಿದಾನಕ್ಕೆ ನಿಲ್ಲುವವರು - ಪೈಗಂಬರರ ಆದೇಶ ಪಾಲನೆಯಲ್ಲಿ ಏಕೆ ವಿಮುಖರಾಗಿದ್ದಾರೆ? ಆಯುಗದಲ್ಲಿ ಯಾರು ತಪ್ಪು ಮಾಡಿದ್ದರೋ ಅವರನ್ನು ಕ್ಷಮಿಸಬಹುದು. ಆದರೆ ಇಪ್ಪತ್ತನೆಯ ಶತಮಾನದಲ್ಲಿ ನಾರಿ ಶಿಕ್ಷಣದ ಬಗ್ಗೆ ಉದಾಸೀನರಾಗಿರುವ ಇವರನ್ನು ಕ್ಷಮಿಸಬಹುದೇ?

ನಮ್ಮಲ್ಲಿ ನಾರಿಯರ ಶಿಕ್ಷಣದ ಪರಿಸ್ಥಿತಿ ಏನು? ನಮ್ಮ ದೇಶದಲ್ಲಿ ಪ್ರತಿ ಇನ್ನೂರು ಜನ ಬಾಲಕಿಯರಲ್ಲಿ ಒಬ್ಬಳಿಗೂ ಅಕ್ಷರ ಜ್ಞಾನವಿಲ್ಲ. ಶಿಕ್ಷಿತ ಮಹಿಳೆ ಎನ್ನಿಸಿಕೊಳ್ಳುವ ಹೆಣ್ಣು ಹತ್ತು ಸಾವಿರದಲ್ಲಿ ಒಬ್ಬಳೂ ಸಿಕ್ಕುವುದಿಲ್ಲ. ನಮ್ಮ ಈ ಬಂಗಾಳದಲ್ಲಿಯೇ ಮೂರು ಕೋಟಿ ಜನ ಮುಸ್ಲಿಂಮರಿದ್ದಾರೆ.

ಕಳೆದ ಜನವರಿ ತಿಂಗಳಿನಲ್ಲಿ ಶಿಕ್ಷಣ ವಿಭಾಗದಿಂದ ನನಗೊಂದು ಪತ್ರ ಬಂದಿತ್ತು. ಬಂಗಾಳದಲ್ಲಿರುವ ಮುಸ್ಲಿಂ ಗ್ರಾಜ್ಯುಯೇಟ್ ಮಹಿಳೆಯರ ಹೆಸರು ಮತ್ತು ವಿಳಾಸಗಳನ್ನು ಆದಷ್ಟು ಬೇಗನೆ ಶಿಕ್ಷಣ ಇಲಾಖೆಗೆ ಕಳುಹಿಸಿ ಕೊಡುವಂತೆ ಆ ಪತ್ರದಲ್ಲಿ ಸೂಚಿಸಲಾಗಿತ್ತು. ಆದರೆ ಬಂಗಾಳದಲ್ಲಿನ ಕೇವಲ ಒಬ್ಬ ಗ್ರಾಜ್ಯುಯೇಟ್ ಮಹಿಳೆಯ ಹೆಸರನ್ನು ಆಗಾ ಮಹಿದುಲ್ ಇಸ್ಲಾಂ ಸಾಹೇಬರ ಮಗಳ ಹೆಸರನ್ನೂ ಮಾತ್ರ ಸೂಚಿಸಲು ನನಗೆ ಸಾಧ್ಯವಾಯಿತು. ಆಗಾ ಸಾಹೇಬರು ಬಂಗಾಳದವರಲ್ಲ. ಅಂದರೆ ಮೂರು ಕೋಟಿ ಮುಸಲ್ಮಾನರಲ್ಲಿ ಕೇವಲ ಒಬ್ಬರೇ ಒಬ್ಬ ಮಹಿಳಾ ಗ್ರಾಜ್ಯುಯೇಟ್.

ಶೇಕ್ ಅಬ್ದುಲ್ಲಾ ಸಾಹೇಬರ ಮಾತುಗಳನ್ನು ನಾನು ಮತ್ತೊಮ್ಮೆ ಉದ್ಧರಿಸುತ್ತಿದ್ದೇನೆ.

''ಶಿಕ್ಷಣ ಪಡೆದ ನಾರಿಯರು ಮರ್ಯಾದೆಗೆಟ್ಟವರಂತೆ ವರ್ತಿಸುತ್ತಾರೆ ಎಂದು ನಾರಿ ಶಿಕ್ಷಣ ವಿರೋಧಿಗಳು ಹೇಳುತ್ತಾರೆ. ಛೀ ಇವರು ತಾವು ಮುಸ್ಲಿಮರು ಎಂದು ಹೇಳಿಕೊಳ್ಳುತ್ತಾರೆ, ಆದರೆ ಇಸ್ಲಾಂ ಮತದ ವಿರುದ್ಧಾರಣೆಯಲ್ಲಿ ತೊಡಗುತ್ತಾರೆ. ಶಿಕ್ಷಣ ಪಡೆದ ಪುರುಷರು ಅಡ್ಡದಾರಿ ಹಿಡಿಯದೇ ಇದ್ದಲ್ಲಿ ಸ್ತ್ರೀಯರು ಏಕೆ ಮತ್ತು ಹೇಗೆ ಅಡ್ಡ ದಾರಿ ಹಿಡಿಯುತ್ತಾರೆ? ತಮ್ಮ ಜನಾಂಗದ ಅರ್ಧದಷ್ಟು ಜನರನ್ನು ಅಜ್ಞಾನದಲ್ಲಿರಿಸಿ, ಪರದೆಯ ಹಿಂದೆ ಬಂಧಿಗಳನ್ನಾಗಿಸುವ ಜನಾಂಗ, ಸ್ತ್ರೀ ಶಿಕ್ಷಣಕ್ಕೆ ಸಮಾನ ಸ್ಥಾನ ನೀಡುವ ಜನಾಂಗದೊಂದಿಗೆ ಸಂಗ್ರಾಮದಲ್ಲಿ ಹೇಗೆ ಸ್ಪರ್ಧೆಗೆ ನಿಲ್ಲಬಲ್ಲದು?

ಭಾರತದಲ್ಲಿ ಇರುವ ಭಿಕ್ಷುಕರ ಸಂಖ್ಯೆ ಒಂದು ಕೋಟಿ ಅದರಲ್ಲಿ ಮುಸ್ಲಿಮರ ಸಂಖ್ಯೆಯೇ ಅಧಿಕ. ಆದುದರಿಂದ ಅವರು ಯಾವ ಮುಖ ಇಟ್ಟುಕೊಂಡು ಇತರ ಜನಾಂಗಗಳೊಂದಿಗೆ ಸಮ ಸಮವಾಗಿ ನಿಲ್ಲಬಲ್ಲರು? ನಾವು ಕುಲೀನರು ಎಂದು ಹೇಳಿಕೊಳ್ಳುತ್ತೇವೆ. ಆದರೆ ಭಿಕ್ಷಾಟನೆ ಅತಿ ಕೀಳು ಕೆಲಸ. ಇದರಲ್ಲಿ ಮುಸ್ಲಿಮರ ಸಂಖ್ಯೆಯೇ ಹೆಚ್ಚು. ಇವರು ತಮ್ಮ ನಾರಿಯರನ್ನು ಶಾರೀರಕ ಮತ್ತು ಮಾನಸಿಕ ವಿಕಾಸಗಳಿಂದ ವಂಚಿತರನ್ನಾಗಿಸಿ, ಎಲ್ಲ ವಿಷಯಗಳಲ್ಲಿ ಅವರನ್ನೂ ಅಂಗವಿಕಲರನ್ನಾಗಿಸಿದ್ದಾರೆ. ಇದರ ಫಲವಾಗಿ ಅವರ ಮಕ್ಕಳು ಆಲಸಿಗಳೂ, ಮೈಗಳ್ಳರೂ ಆಗುತ್ತಿದ್ದಾರೆ. ಇಂತಹ ಮಕ್ಕಳು ಅಪ್ಪ-ಅಜ್ಜನ ಹೆಸರು ಹೇಳಿಕೊಂಡು ಭಿಕ್ಷೆ ಬೇಡುವುದನ್ನು ಬಿಟ್ಟು ಬೇರೇನು ಮಾಡಲು ಸಾಧ್ಯ?

ಈಗ ಸ್ತ್ರೀಯರಿಗೆ ಮತದಾನದ ಅಧಿಕಾರ ದೊರೆತಿದೆ. ಆದರೆ ಮುಸ್ಲಿಂ ಮಹಿಳೆಯರು ಸ್ವ ಇಚ್ಛೆಯಿಂದಲೇ ಈ ಅಧಿಕಾರವನ್ನು ಬಿಟ್ಟುಕೊಟ್ಟಿದ್ದಾರೆ. ಕಳೆದ ಚುನಾವಣೆಯಲ್ಲಿ ಕಲ್ಕತ್ತಾ ನಗರದಲ್ಲಿ ಕೇವಲ ನಾಲ್ಕು ಜನ ಮಹಿಳೆಯರು ಮಾತ್ರ ಮತದಾನ ಮಾಡಿದ್ದಾರೆ. ಇದು ಮುಸಲ್ಮಾನರಿಗೆ ಗೌರವ ತರುವಂತಹುದೇನು? ಅವರು ಯಾವ ಅವಕಾಶದ ನಿರೀಕ್ಷೆಯಲ್ಲಿ ಕುಳಿತಿದ್ದಾರೆ?

ಎಲ್ಲಿಯವರೆಗೆ ಸ್ತ್ರೀಯರಿಗೆ, ಅವರಿಗೆ ನ್ಯಾಯವಾಗಿ ಸಿಗಬೇಕಾದ ಹಕ್ಕುಗಳನ್ನು ನೀಡುವುದಿಲ್ಲವೋ, ಅಲ್ಲಿಯವರೆಗೆ ಅವರು ಸ್ತ್ರೀಯರಿಗೆ ಶಿಕ್ಷಣವನ್ನು ಸಹ ನೀಡಲಾರರು. ನಮ್ಮ ಜನಾಂಗವನ್ನು ಉದ್ಧಾರ ಮಾಡಲಾಗದ ಈ ಜನರು, ಇನ್ನು ದೇಶೋದ್ಧಾರವನ್ನು ಹೇಗೆ ಮಾಡಿಯಾರು? ತನ್ನ ಅರ್ಧಾಂಗಿಯನ್ನು ಬಂಧನದಲ್ಲಿರಿಸಿ ತಾನು ಮಾತ್ರ ಸ್ವಚ್ಛಂದವಾಗಿ ಇರಲು ಬಯಸುವುದು ಕೇವಲ ಹುಚ್ಚರ ಲಕ್ಷಣ. ನಮ್ಮ ಮುಸ್ಲಿಂ ಜನಾಂಗ ನಾರಿಯರ ಉನ್ನತಿಯ ಯಾವುದೇ ಪ್ರಯತ್ನವನ್ನೂ ಇಷ್ಟಪಡುವುದಿಲ್ಲ. ಆದರೆ ಅಲ್ಲಾಹ್ಸ್ ಮಹಿಮೆ ಅಲ್ಲಾಹ್‌ನು ಈ ಜಗತ್ತನ್ನು ಬಿಡಿಸಲಾಗದ ಒಂದು ಬಂಧನದಲ್ಲಿ ಇರಿಸಿದ್ದಾನೆ. ಇಲ್ಲಿ ನಾವು ಒಬ್ಬರು ಇನ್ನೊಬ್ಬರನ್ನು ಅತಿಕ್ರಮಿಸಿ ಸಾಗಲು ಸಾಧ್ಯವಿಲ್ಲ. ಮುಸ್ಲಿಂ ಸೋದರರು ಎಲ್ಲಿಯವರೆಗೆ ನಮ್ಮ ಸುಖ-ದುಃಖಗಳ ಬಗ್ಗೆ ಯೋಚನೆ ಮಾಡುವುದಿಲ್ಲವೋ ಅಲ್ಲಿಯವರೆಗೆ ಭಾರತದ ಉಳಿದ 22 ಕೋಟಿ ಜನರು ಅದರ ಮಾತುಗಳನ್ನು ಕೇಳುವುದಿಲ್ಲ. ಹಾಗೆಯೇ ಎಲ್ಲಿಯವರೆಗೆ ಈ 8 ಕೋಟಿ ಮುಸ್ಲಿಮರ ಮಾತುಗಳನ್ನು ಅವರು ಕೇಳುವುದಿಲ್ಲವೋ ಅಲ್ಲಿಯವರೆಗೆ ಅವರ ಮಾತುಗಳನ್ನು ಬ್ರಿಟೀಷ್ ಸರಕಾರ ತನ್ನ ಕಿವಿಯ ಮೇಲೆ ಹಾಕಿಕೊಳ್ಳುವುದಿಲ್ಲ.

ಮುಸ್ಲಿಮರ ದೈನೇಸಿತನ ಮತ್ತು ದುರ್ದೆಸೆಗಳಿಗೆ ಸ್ತ್ರೀಶಿಕ್ಷಣದ ಬಗ್ಗೆ ಅವರು ಉದಾಸೀನರಾಗಿರುವುದೇ ಆಗಿದೆ. ಕೆಲವಷ್ಟು ಜನ ಮುಸ್ಲಿಮರು ಅಲಿಘರ್ ಮತ್ತು ಢಾಕಾ ವಿಶ್ವವಿದ್ಯಾಲಯಗಳಲ್ಲೋ ಅಥವಾ ಕಲ್ಕತ್ತಾದ ಇಸ್ಲಾಮಿಯಾ ಕಾಲೇಜಿನಲ್ಲಿ ಭರ್ತಿಯಾಗಿ ಪುಲಿಸಿರಾತ್ (ಪರಲೋಕಕ್ಕೆ ಹೋಗಲು ಇರುವ ಸೇತುವೆ) ದಾಟುತ್ತೇವೆ ಹಾಗೂ ಹಾಗೆ ದಾಟುವಾಗ ಹೆಂಗಸರನ್ನೂ ಹ್ಯಾಂಡ್ ಬ್ಯಾಗಿನಲ್ಲಿ ಹಾಕಿಕೊಂಡು, ತೆಗೆದುಕೊಂಡು ಹೋಗುತ್ತೇವೆ ಎಂದುಕೊಂಡಿರಬೇಕು ನಮ್ಮ ಮುಸ್ಲಿಂ ಸೋದರರು.

ಆದರೆ ವಿಶ್ವನಿಯಾಮಕನ ವಿಧಿಯಂತೆ ಎಲ್ಲರೂ ಸ್ವಕರ್ಮದ ಫಲವನ್ನೂ ಅನುಭವಿಸಲೇ ಬೇಕಾಗುತ್ತದೆ. ಆದುದರಿಂದ ಕಬ್ಬಿಣದ ಪೆಟ್ಟಿಗೆಯಲ್ಲಿ ಬಂಧಿಗಳಾಗಿ, ಗೂಡ್ಸ್ ಗಾಡಿಯಲ್ಲಿ ಸಾಗುವುದನ್ನು ಬಿಟ್ಟು ನಾರಿಯರು ತಮ್ಮ ಹೆಣ್ಣು ಮಕ್ಕಳ ಶಿಕ್ಷಣದತ್ತ ಗಮನ ಹರಿಸಬೇಕಾಗಿದೆ. ತಮ್ಮ ಹೆಣ್ಣು ಮಕ್ಕಳ ವಿವಾಹದ ಸಂದರ್ಭದಲ್ಲಿ ಅಲಂಕಾರಕ್ಕಾಗಿ ಅಥವಾ ಮೆಹರ್ ನೀಡಲು ಮಾಡುವ ಖರ್ಚಿನ ಅಲ್ಪಾಂಶವನ್ನೂ ಅವರಿಗೆ ಶಿಕ್ಷಣ ನೀಡಲು ಮತ್ತು ಅವರನ್ನೂ ಆರೋಗ್ಯವಂತರನ್ನಾಗಿ ಇರಿಸಲು ವೆಚ್ಚ ಮಾಡಿರಿ. ಶರೀರವನ್ನು ಆರೋಗ್ಯವಾಗಿ ಇರಿಸಿಕೊಳ್ಳಲು ವ್ಯಾಯಾಮ ಮತ್ತು ಶುದ್ಧ ಹವೆ ಅತ್ಯಾವಶ್ಯಕ. ಅಲ್ಲಾಹ್‌ನು ಉಚಿತವಾಗಿ ನೀಡಿರುವ ಈ ಶುದ್ಧ ಹವೆಯನ್ನು ಉಸಿರಾಡಲು ನಮ್ಮ ನಾರಿಯರೇಕೆ ಇಷ್ಟಪಡುತ್ತಿಲ್ಲ ಎನ್ನುವುದೇ ನನಗೆ ತಿಳಿಯದು. ಐದಾರು ವರ್ಷಗಳ ಹಿಂದೆ ಡಾಕ್ಟರ್ ಮಿಸ್ ಕೊಹೆನ್ ನಮ್ಮ ಶಾಲೆಯ ವಿದ್ಯಾರ್ಥಿನಿಯರ ಆರೋಗ್ಯ ತಪಾಸಣೆಗೆ ನಿಯುಕ್ತರಾಗಿದ್ದರು. ತಪಾಸಣೆಯ ನಂತರ ಆ ರಿಪೋರ್ಟ್‌ನ್ನು ಆಯಾ ಬಾಲಕಿಯರ ತಂದೆ-ತಾಯಿಗಳಿಗೆ ಕಳುಹಿಸಲಾಗಿತ್ತು. ಕೆಲವು ಹುಡುಗಿಯರ ರಿಪೋರ್ಟ್‌ಗಳಲ್ಲಿ ಆ ಹುಡುಗಿಯರಿಗೆ ಇರುವ ರೋಗಗಳಿಗಾಗಿ ಡಾಕ್ಟರ್‌ರ ಬಳಿ ತಪಾಸಣೆ ಮಾಡಿಸುವಂತೆ ಬರೆಯಲಾಗಿತ್ತು. ಇದನ್ನು ಕಂಡು ಆ ಪೋಷಕರು ನೀಡಿದ ಉತ್ತರಗಳು ಸರಿಸುಮಾರು ಹೀಗಿದ್ದವು :

''ಓದು ಕಲಿಯಲಿಕ್ಕಾಗಿ ನಾವು ಮಕ್ಕಳನ್ನೂ ಶಾಲೆಗೆ ಕಳುಹಿಸುತ್ತೇವೆ. ಆಕೆಯ ಕಣ್ಣು ಸರಿಯಾಗಿ ಕಾಣಿಸುವುದಿಲ್ಲ, ಕಿವಿ ಸರಿಯಾಗಿ ಕೇಳಿಸುವುದಿಲ್ಲ, ಹಲ್ಲು ಅಲುಗಾಡುತ್ತಿವೆ ಇತ್ಯಾದಿಗಳನ್ನು ತಿಳಿಯುವುದಕ್ಕೆ ಅಲ್ಲ. ಹೀಗೆಲ್ಲ ಹೇಳಿದರೆ ನಮ್ಮ ಹುಡುಗಿಯ ಮದುವೆ ಆಗುವುದಾದರೂ ಹೇಗೆ? ಈ ವಿಷಯಗಳೆಲ್ಲ ಒತ್ತಟ್ಟಿಗಿರಲಿ. ನಮ್ಮ ಹುಡುಗಿಯನ್ನೂ ಇನ್ನು ಮುಂದೆ ಡಾಕ್ಟ್ರಾನಿ (Lady Doctor) ಅವರಿಂದ ತಪಾಸಣೆ ಮಾಡಿಸಬೇಡಿ'' ಹಾಯ್ ಅಲ್ಲಾಹ್, ಹೆಣ್ಣು ಮಕ್ಕಳ ಆರೋಗ್ಯದ ಬಗ್ಗೆ ತಾಯಿಗೆ ಎಳ್ಳಷ್ಟೂ ಚಿಂತೆ ಇಲ್ಲ. ಇರುವುದೆಲ್ಲ ಆಕೆಯ ಮದುವೆಯ ಚಿಂತೆ, ಅಶಿಕ್ಷಿತ ತಾಯಿಯರಿಂದ ಇದಕ್ಕಿಂತಲೂ ಹೆಚ್ಚಿನದೇನನ್ನು ನಿರೀಕ್ಷಿಸಬಹುದು?

ನಮ್ಮ ಶಾಲೆಯಲ್ಲಿ ವಿದ್ಯಾರ್ಥಿನಿಯರು ಸಾಮಾನ್ಯವಾಗಿ ಇತಿಹಾಸ, ಆರೋಗ್ಯ, ಭೂಗೋಳಗಳಲ್ಲಿ ಫೇಲಾಗುತ್ತಾರೆ. ಇದಕ್ಕೆ ಕಾರಣವೇನೆಂದರೆ ಅವರು ತಮ್ಮ ಮನೆ, ಶಾಲೆ ಎರಡನ್ನೂ ಬಿಟ್ಟು ಜಗತ್ತಿನಲ್ಲಿ ಬೇರೆ ಏನನ್ನೂ ನೋಡಿರುವುದಿಲ್ಲ.

ಈ ಜಗತ್ತಿನಲ್ಲಿ ತಮ್ಮ ತಂದೆ, ಅಣ್ಣ ತಮ್ಮಂದಿರನ್ನು ಬಿಟ್ಟು ಬೇರೆಯವರೂ ಇರಬಹುದೆನ್ನುವುದೂ ಅವರಿಗೆ ತಿಳಿಯದು. ಮುಚ್ಚಿದ ಕೊಠಡಿಯಲ್ಲಿ ಸದಾ ಕಾಲ ಇದ್ದು ರೋಗ ಸೋಸುವ ಅಮ್ಮ ಅಜ್ಜಿಯರನ್ನಷ್ಟೇ ಅವರು ನೋಡಿರುತ್ತಾರೆ. ಕಾಯಿಲೆಯಾದರೆ ಡಾಕ್ಟರರನ್ನು ಕರೆಯಬೇಕೆನ್ನುವುದಷ್ಟೇ ಅವರಿಗೆ ತಿಳಿಯುವುದು. ಈ ಅನಿಷ್ಟಗಳಿಗೆಲ್ಲ ಇರುವ ಏಕೈಕ ಮದ್ದು ಶಿಕ್ಷಣ.

ನನ್ನ ಮಾತುಗಳನ್ನು ಮುಗಿಸುವ ಮುನ್ನ ಸಾಖಾವತ್ ಮೆಮೊರಿಯಲ್ ಗರ್ಲ್ಸ್ ಸ್ಕೂಲ್ ಹಾಗೂ ಅಂಜುಮನೆ ಖಾವಾತೀನ್ ಇಸ್ಲಾಂ ಇವೆರಡು ಸಂಸ್ಥೆಗಳ ಬಗ್ಗೆ ಹೇಳಿದರೆ ಅಪ್ರಸ್ತುತವಾಗಲಾರದು. ಕಲ್ಕತ್ತಾದ ಮುಸ್ಲಿಂ ಸಮಾಜದ ಉನ್ನತಿಗಾಗಿ ಈ ಎರಡೂ ಸಂಸ್ಥೆಗಳು ಪ್ರಯತ್ನಿಸುತ್ತಿವೆ. ಆದರೆ ಈ ಪ್ರಯತ್ನದಲ್ಲಿ ಪೂರ್ಣವಾಗಿ ಯಶಸ್ಸನ್ನೂ ಪಡೆಯಲಾಗಿಲ್ಲ ಎನ್ನುವುದೇ ದುಃಖದ ವಿಷಯ. ಶಾಲೆಯನ್ನು ಹೈಸ್ಕೂಲ್ ಹಂತಕ್ಕೆ ಏರಿಸಬೇಕಿದೆ. ಇದಕ್ಕಾಗಿ ಶಾಲೆಗೆ ತನ್ನದೇ ಆದ ಕಟ್ಟಡದ ಅವಶ್ಯಕತೆ ಇದೆ. ಹಾಗೆಯೇ ಅಂಜುಮಾನ್ ಸಂಸ್ಥೆಯು ಕಲ್ಕತ್ತಾದ ಮುಸ್ಲಿಂ ಮಹಿಳೆಯರಲ್ಲಿ ಇನ್ನಷ್ಟು ಜನಪ್ರಿಯಗೊಳ್ಳಬೇಕಾಗಿದೆ.

ಈ ದಿನ ನಿಮ್ಮೆಲ್ಲರ ಬಹಳಷ್ಟು ಸಮಯವನ್ನು ನಷ್ಟಮಾಡಿದ್ದೇನೆ. ಇದಕ್ಕಾಗಿ ಕ್ಷಮೆ ಯಾಚಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

(1926)

◆

ತಾಯಿ ತೆರೆಸಾಗೆ 'ಸಂತ' ಪದವಿ!

1979ರಲ್ಲಿ ನೊಬೆಲ್ ಶಾಂತಿ ಪುರಸ್ಕಾರ ಪಡೆದ ಮದರ್ ತೆರೇಸಾ ಅವರನ್ನು ಸಂತರ ಪಂಕ್ತಿಗೆ ಸೇರಿಸುವ ಪ್ರಯತ್ನ ಬರದಿಂದ ನಡೆದಿದೆ. 'ವಿಶೇಷ ಪುಣ್ಯದಿಂದ ಸ್ವರ್ಗದಿಂದ ಉಚ್ಚ ಸ್ಥಾನವನ್ನೂ ಭೂಮಿಯಲ್ಲಿ ಪೂಜ್ಯತೆಯನ್ನೂ ಪಡೆದವರೆಂದು' ಕ್ರೈಸ್ತ ಮತ ಅಧಿಕಾರ ಪೂರ್ವಕವಾಗಿ ಅಂಗೀಕರಿಸಿದ ಮೇಲೆಯೇ 'ಸಂತ' ಪದವಿಯನ್ನು ನೀಡುವುದು.

ಅಲಬಾನನಲ್ಲಿ ಜನಿಸಿ, ಕಲಕತ್ತೆಯಲ್ಲಿ ನೆಲೆಸಿ ಬಡವರ ಸೇವೆಯಲ್ಲಿ ಇಡೀ ಬದುಕನ್ನು ಕಳೆದ ಮಹಾತಾಯಿ ತೆರೆಸಾಗೆ ಸಂತ ಪದವಿಯ ಗರಿ ತೊಡಿಸುವ ಹುರುಪು. ಸಂತ ಪದವಿಯನ್ನು ವ್ಯಾಟಿಕನ್ ಸಿಟಿ, ಬಡವರ ಸೇವೆ ಮಾಡಿದ ಕಾರಣಕ್ಕೆ ನೀಡಿ ಬಿಡುವುದಿಲ್ಲ. ಸಂತ ಪದವಿ ಪಡೆಯಲು ಆಕೆ ಪವಾಡಗಳನ್ನು ಮಾಡಿರಬೇಕಾದ್ದು ಕಡ್ಡಾಯ. ಪವಾಡ ಮಾಡಿದ ಪುರಾವೆಗಳೂ ಬೇಕು! ಅರ್ಧ ಶತಮಾನ ತನ್ನದಲ್ಲದ ಬಡ ದೇಶದಲ್ಲಿ ಜನರ ಸೇವೆಗೆ ನಿಂತದ್ದು ಪವಾಡವಲ್ಲವೆ? ಉಹುಂ, ವ್ಯಾಟಿಕನ್ ಸಿಟಿ ಬಯಸುವ ಪವಾಡವೇ ಬೇರೆ. ಅಂತಹ ಪವಾಡಗಳನ್ನು ಇದೀಗ 'ಒದಗಿಸುವ' ಪ್ರಯತ್ನ ನಡೆದಿದೆ. ಮುವತ್ತು ವರ್ಷದ ಕಲಕತ್ತೆಯ ಮಹಿಳೆ ಮೊನಿಕ ಬೆಸ್ರ ಎಂಬಾಕೆ, ಹೊಟ್ಟೆಯ ಗೆಡ್ಡೆಯಿಂದ ನರಳುತ್ತಿದ್ದಾಗ ಮದರ್ ತೆರೆಸಾ ತಮ್ಮ ಪವಾಡದಿಂದ ಆಕೆಯ ರೋಗವನ್ನು ನಿವಾರಿಸಿದರು ಎಂದು ವ್ಯಾಟಿಕನ್ ಸಮಿತಿ ಹೇಳುತ್ತಿದೆ.

ಆದರೆ ಪಶ್ಚಿಮ ಬಂಗಾಲದ ಆರೋಗ್ಯ ಮಂತ್ರಿ ಮತ್ತು ಮೊನಿಕಾಳಿಗೆ ಚಿಕಿತ್ಸೆ ನೀಡಿದ ವೈದ್ಯರು 'ಮೊನಿಕಾಳ ರೋಗ ನಿವಾರಣೆಯಾದದ್ದು ವೈದ್ಯ ಚಿಕಿತ್ಸೆಯಿಂದ, ಪವಾಡದಿಂದ ಅಲ್ಲ' ಎನ್ನುತ್ತಾರೆ. ವ್ಯಾಟಿಕನ್ ಸಮಿತಿ ಮೊನಿಕಾಗೆ ರೋಗ ವಾಸಿಯಾಗಲು ವೈಜ್ಞಾನಿಕವಾಗಿ ಸಾಧ್ಯವೇ ಇರಲಿಲ್ಲ, ಆದುದರಿಂದ ಇದು ಪವಾಡವೆಂದು ಸಾರುತ್ತಿದೆ. ಇದನ್ನು ಪೋಪರಾದ ಎರಡನೇ ಜಾನ್ ಪಾಲರು ಒಪ್ಪಿಕೊಳ್ಳಬೇಕಿದೆ. ಅಷ್ಟಕ್ಕೇ ತಾಯಿ ತೆರೆಸಾಗೆ ಸಂತ ಪದವಿ ದೊರೆಯುವುದಿಲ್ಲ. ಸಂತರಾಗಲು ಕನಿಷ್ಠ ಎರಡು ಪವಾಡಗಳು ಬೇಕಿವೆ. ಇನ್ನೊಂದು ಪವಾಡವನ್ನು ತೆರೆಸಾ ಹೆಸರಿನಲ್ಲಿ ಕಂಡು ಹಿಡಿಯುವವರೆಗೂ ಆಕೆ ನಮಗೆಲ್ಲರಿಗೂ ಕೇವಲ ತಾಯಿ, ಸಂತಳಲ್ಲ. ದಿಟವಾಗಿ ಹೇಳುವುದಾದರೆ, ನಮ್ಮ ಮಕ್ಕಳಿಗೆ ತಾಯಿಯಾಗುವುದೂ ಸುಲಭ, ಜಗತ್ತಿನೆಲ್ಲ ಬಡಜನರಿಗೆ, ರೋಗಿಷ್ಠರಿಗೆ ತೆರೆಸಾರಂತೆ 'ತಾಯಿ' ಯಾಗುವುದು ಮಾತ್ರ ದೊಡ್ಡ ಪವಾಡ.

ತೆರೆಸಾ 1950ರಲ್ಲಿ ಕಲಕತ್ತೆಯ ಕೊಳಚೆ ಪ್ರದೇಶದಲ್ಲಿ ತಮ್ಮ ಸೇವೆಯನ್ನು ಆರಂಭಿಸಿದರು. ನೀಲಿ ಅಂಚಿನ ಬಿಳಿಯ ಸೀರೆಯಲ್ಲಿಯ ಈ ಸಣ್ಣ ದೇಹದ ಮಹಿಳೆ ಜಗತ್ತಿಗೇ ತಾಯ್ತನದ ಪ್ರತೀಕವಾದರು. ಬಡವರ, ಸಮಾಜ ಅಲಕ್ಷಿಸಿದ ರೋಗಿಗಳ ಸೇವೆಯಲ್ಲಿ ಅರ್ಧ ಶತಮಾನ ಕಳೆದರು. ತಾಯಿ ತೆರೆಸಾ ಸ್ಥಾಪಿಸಿದ 'ಸಿಸ್ಟರ್ಸ್ ಆಫ್ ಚಾರಿಟಿ' ಇಂದು 120 ದೇಶಗಳಲ್ಲಿ ಕೆಲಸ ಮಾಡುತ್ತಿದೆ. ಇದಕ್ಕಿಂತಾ ಪವಾಡ ಬೇಕೆ? ಆಕೆ ಮನುಷ್ಯತ್ವದ ಪ್ರತೀಕವಾಗಿದ್ದರು. ನೊಂದವರನ್ನು ತಮ್ಮವರೆಂದು ಎದೆಗೊತ್ತಿಕೊಂಡು ಕಾಪಾಡಿದವರು. ಮಾನವ ಸೇವೆಯಲ್ಲಿ ಕಳೆದ ಆಕೆಯ ಬದುಕೇ ಒಂದು ಪವಾಡ. ಬಡವರ ಸಂತರಾದ ತಾಯಿ ತೆರೆಸಾಗೆ ಬರೀ ಭಾರತವಲ್ಲ, ಜಗತ್ತಿನೆಲ್ಲ ಜನತೆಯೂ ಅದಾಗಲೆ ಸಂತಳೆಂದು ಮಾನ್ಯತೆ ನೀಡಿದೆ, ಅದಕ್ಕೆ ಅಧಿಕೃತ ಠಸ್ಸೆಯೊತ್ತುವ ಅಗತ್ಯವೇನೋ ತಿಳಿಯದು.

◆

ಪಾಕಿಸ್ಥಾನದ ಭಾಂವ್ರಿದೇವಿಗೆ ದೊರೆತ ನ್ಯಾಯ

- *ನೇಮಿಚಂದ್ರ*

ಸಾಮೂಹಿಕ ಅತ್ಯಾಚಾರಕ್ಕೆ ಒಳಗಾದ ಭಾಂವ್ರಿದೇವಿ ಭಾರತದಲ್ಲಿ ನ್ಯಾಯಕ್ಕಾಗಿ ಹತ್ತು ವರ್ಷದಿಂದ ಕಾಯುತ್ತಿರುವಾಗ, ನೆರೆಯ ಪಾಕಿಸ್ತಾನದಲ್ಲಿ ಗುಂಪು ಅತ್ಯಾಚಾರಕ್ಕೆ ಬಲಿಯಾಗಿದ್ದ ಮುಕ್ತಿಯರ್ ಮಾಯಿಗೆ ಐದು ತಿಂಗಳಲ್ಲಿ ನ್ಯಾಯ ದೊರೆತದ್ದು ತಿಳಿದು ಮನಸ್ಸಿಗೆ ಒಂದಿಷ್ಟು ಸಮಾಧಾನವಾಗುತ್ತಿದೆ.

ಲಾಹೋರಿನ 'ಡೇರ ಘಾಸಿ ಖಾನ್ ಆತಂಕವಾದ - ವಿರೋಧಿ ನ್ಯಾಯಾಲಯ' ಮೀರಾವಾಲಾ ಗುಂಪು ಅತ್ಯಾಚಾರದ ಈ ಕೇಸಿನಲ್ಲಿ ಆರು ಜನಕ್ಕೆ ಮರಣದಂಡನೆ ವಿಧಿಸಿ, ಎಂಟು ಜನರನ್ನು ಬಿಡುಗಡೆ ಮಾಡಿದೆ. ಜೂನ್ 30ರಂದು ಘೋರ ಅತ್ಯಾಚಾರಕ್ಕೆ ಬಲಿಯಾದ ಮೂವತ್ತು ವರ್ಷ ವಯಸ್ಸಿನ ಮುಕ್ತಿಯರ್ ಮಾಯಿ, ತೀರ್ಪು ಹೊರಬಿದ್ದಾಗ ನ್ಯಾಯಾಲಯದಲ್ಲಿರಲಿಲ್ಲ. ಇಡೀ ಜಗತ್ತು ಖಂಡಿಸಿದ ಅತ್ಯಾಚಾರವಿದು. ನೆರೆದ ಜನ ಸಮೂಹ, ಕಾದು ನಿಂತ ವಿದೇಶಿ ಪತ್ರಕಾರರು, ರಕ್ಷಣೆಗೆ ನಿಂತ ಕಾವಲು ಪಡೆಯೆದುರು ತೀರ್ಪು ಹೊರಬಿದ್ದಿತು. ಮಾಯಿಯ ಮೇಲೆ ಅತ್ಯಾಚಾರ ನಡೆಸಿದ ಪ್ರಮುಖ ವ್ಯಕ್ತಿಗಳಾದ ಅಲ್ಲಾ ದಿತ್ತಾ ಮಸ್ತೋಯಿ, ಅಬ್ದುಲ್ ಮಸ್ತೋಯಿ, ಫಯಸ್ ಹುಸೇನ್, ಗುಲಾಮ್ ಫರಿದ್, ಗ್ರಾಮದ ಪಂಚ ರಜ್ಞಾನ್ ಮತ್ತು ಸರಪಂಚ ಫೇಸ್ ಭುಕ್ಷ್ ಮಸ್ತೋಯಿ ಅವರಿಗೆ ನೇಣು ದಂಡನೆ ವಿಧಿಸಲಾಯಿತು. ತೀರ್ಪು ನೀಡಿದೊಡನೆ ಅಪರಾಧಿಗಳನ್ನು ಕೆ.ಜಿ.ಖಾನ್ ಜೈಲಿಗೆ ತಕ್ಷಣ ರವಾನಿಸಿದರು. ಪತ್ರಕರ್ತರೊಡನೆ ಮಾತನಾಡಿದ ಮುಕ್ತಿಯರ್ ಮಾಯಿ, 'ಮಸ್ತೋಯಿ ಜನ ಆಕೆಯನ್ನು ಮತ್ತು ಆಕೆಯ ಕುಟುಂಬ ವರ್ಗದವನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿರುವುದನ್ನು' ತಿಳಿಸಿದಳು. ಅತ್ಯಂತ ಆತಂಕದ ಪರಿಸರದಲ್ಲಿ ತಾವು ಬದುಕುತ್ತಿರುವುದನ್ನೂ ಅರುಹಿದಳು. ಆಕೆಯ ಮೇಲೆ ಅತ್ಯಾಚಾರ ಎಸಗಿದ ಅಪರಾಧಿಗಳಿಗೆ ಮರಣ ದಂಡನೆ ವಿಧಿಸಿದ್ದರೂ, ಆಕೆಯ ಕುಟುಂಬ ತೀವ್ರ ಭೀತಿಯಲ್ಲಿ ಬದುಕುತ್ತಿದೆ. 'ಒಬ್ಬನನ್ನು ನೇಣುಗಂಬ ಏರಿಸಿದರೆ, ನಿಮ್ಮ ಕುಟುಂಬದ ಇಬ್ಬರನ್ನು ಕೊಲ್ಲುತ್ತೇವೆ' ಎಂದು ಬೆದರಿಸುತ್ತಿದ್ದಾರೆ.

ಮುಕ್ತಿಯರ್ ಮಾಯಿ ಮೂವತ್ತು ವರ್ಷದ ಮಹಿಳೆ. ಆಕೆಯ ತಮ್ಮ ಮಸ್ತೋಯಿ ಸಮುದಾಯಕ್ಕೆ ಸೇರಿದ ಹುಡುಗಿಯೊಡನೆ ಪ್ರೇಮ ಸಂಬಂಧ ಬೆಳೆಸಿದ ಅಪರಾಧಕ್ಕೆ, ಗ್ರಾಮ ಪಂಚಾಯಿತಿಯ ಪ್ರಮುಖರು ವಿಧಿಸಿದ ಶಿಕ್ಷೆ - ಅಕ್ಕನ ಮೇಲೆ ಗುಂಪು ಅತ್ಯಾಚಾರ. ಇಪ್ಪತ್ತೊಂದನೇ ಶತಮಾನದ ಆದಿಯಲ್ಲೂ 'ಕತ್ತಲ ಯುಗ'ದ ಇಂತಹ ಕ್ರೂರ ತೀರ್ಪು ಕೇಳಿ ಜಗತ್ತಿನೆಲ್ಲ ಮೂಲೆಗಳಿಂದ ಪ್ರತಿಭಟನೆಯ ದನಿಗಳು ಕೂಗಿ ಬಂದವು. ಇಷ್ಟೆಲ್ಲ ಪ್ರತಿಭಟನೆಯ ನಡುವೆ, '21ನೇ ಶತಮಾನದ ಪಾಕಿಸ್ತಾನದಲ್ಲಿ ನಡೆದ ಅತ್ಯಂತ ಹೇಯ ಅಪರಾಧವೆಂದು' ಸುಪ್ರೀಂ ಕೋರ್ಟ್ ವರ್ಣಿಸಿದ ಮೇಲೆ, ಜುಲೈ 26ರಂದು, ಹದಿನಾಲ್ಕು ಜನರನ್ನು ಈ ಸಂಬಂಧವಾಗಿ ಬಂಧಿಸಲಾಗಿತ್ತು.

'ನಮಗೆ ಸಾವಿನ ಭಯವಿಲ್ಲ, ನಮ್ಮನ್ನು ಕೊಂದರೂ ನಾವು ಸತ್ತರೂ ನನಗೆ ಸಮಾಧಾನವಿದೆ, ಸರ್ವಶಕ್ತ ಅಲ್ಲಾನನ್ನು ಎದುರು ನಿಲ್ಲುವ ಬಲವಿದೆ, ಹೆಣ್ಣಿನ ಮೇಲಿ ಅತಿ ಕ್ರೂರ ಅತ್ಯಾಚಾರದ ವಿರುದ್ಧ ಜನ ಸ್ವರವೆತ್ತುವಂತೆ ಮಾಡಿದ ತೃಪ್ತಿ ಇದೆ' ಎನ್ನುತ್ತಾರೆ ಈ ಕೇಸಿನ ಪ್ರಮುಖ ಫಿರ್ಯಾದಿ ಸಾಕ್ಷಿಯಾದ ಅಬ್ದುಲ್ ರಸಕ್. 'ನನಗೆ ನ್ಯಾಯಾಂಗದ ಮೇಲೆ ನಂಬಿಕೆ ಇದೆ. ದೇವರ ಹೆಸರಲ್ಲಿ ಅವರು ನ್ಯಾಯ ನಿರ್ಣಯ ಮಾಡುತ್ತಾರೆ. ದೇವರು ನಮ್ಮಂತಹ ಬಡ ಜನರಿಗೆ ಅನ್ಯಾಯದ ವಿರುದ್ಧ ಎದ್ದು ನಿಲ್ಲುವ ಶಕ್ತಿ ನೀಡಿದ್ದಾನೆ. ಇದೇ ಶಕ್ತಿಯನ್ನು ತೀರ್ಪು ನೀಡುವ ನ್ಯಾಯವಾದಿಗಳಿಗೆ ಕೊಡುತ್ತಾನೆ' ಎಂದು ಆತ ನಂಬಿದ್ದನು. ಆತನ ನಂಬಿಕೆ ಸುಳ್ಳಾಗಲಿಲ್ಲ. 'ನಮ್ಮ ಸುತ್ತಲು ನಮ್ಮ ರಕ್ಷಣೆಗೆ ಪೋಲೀಸರಿದ್ದಾರೆ. ಆದರೆ ಮುಂದೇನಾಗುತ್ತದೆ ಎಂದು ನಮಗೆ ತಿಳಿಯದು ನಾವು ಸದಾ ಕಾಲಕ್ಕೂ ಪೋಲೀಸರ ಪಹರೆಯಲ್ಲಿ ಬದುಕಲು ಇಷ್ಟ ಪಡುವುದಿಲ್ಲ. ದೇವರಲ್ಲಿ ಒಂದೇ ಪ್ರಾರ್ಥನೆ - ಅಪರಾಧಿಗಳಿಗೆ ತಕ್ಕ ಶಿಕ್ಷೆಯಾಗಲಿ'.

ಸಾರ್ವಜನಿಕ ಫಿರ್ಯಾದಿಗಳು ಹದಿನಾಲ್ಕು ಮಂದಿ ಅಪರಾಧಿಗಳೂ ಮರಣ ದಂಡನೆ ವಿಧಿಸುವಂತೆ ಆಗ್ರಹಿಸಿತ್ತು. ಅವರಲ್ಲಿ ನಾಲ್ಕು ಮಂದಿ ಮಾಯಿಯ ಮೇಲೆ ಅತ್ಯಾಚಾರ ಮಾಡಿದ್ದರು, ಉಳಿದವರು ಅದಕ್ಕೆ ಪ್ರೋತ್ಸಾಹ ನೀಡಿ ಹುರಿದುಂಬಿಸಿದ್ದರು. ಈ ಅಪರಾಧಿಗಳು ಮಸ್ತೋಯಿ ಗುಂಪಿಗೆ ಸೇರಿದವರು. ಕಡೆಗೂ ಪಂಚ, ಸರಪಂಚನನ್ನು ಸೇರಿ ಆರು ಮಂದಿಗಾದರೂ ಮರಣ ದಂಡನೆ ವಿಧಿಸಿರುವುದು ಪ್ರತಿಯೊಬ್ಬ ಮಾನವತಾವಾದಿಗೆ ಸಮಾಧಾನ ತಂದಿದೆ.

◆

ಹೆಣ್ಣಿಗೇ ದಂಡನೆ...

- ಎನ್ಸಿ

ಡಿಸೆಂಬರ್ 7ರಂದು ನೈಜೀರಿಯಾದಲ್ಲಿ 'ವಿಶ್ವಸುಂದರಿ' ಸ್ಪರ್ಧೆ ನಡೆಯಲಿದೆ. ಈ ವಿಪರ್ಯಾಸವನ್ನು ನೋಡಿ, ಒಂದು ಕಡೆ ನೈಜೀರಿಯಾದಂತಹ ಹಿಂದುಳಿದ ದೇಶದಲ್ಲಿ ತುಂಡು ಬಟ್ಟೆಯಲ್ಲಿ ದೇಹ ಸೌಂದರ್ಯವನ್ನು ಪ್ರದರ್ಶಿಸುವ 'ವಿಶ್ವಸುಂದರಿ ಸ್ಪರ್ಧೆ' ಏರ್ಪಡುತ್ತದೆ, ಇನ್ನೊಂದು ಕಡೆಗೆ ಇದೇ ದೇಶದ ಮಹಿಳೆಯೊಬ್ಬಳನ್ನು, ವಿವಾಹದ ಹೊರಗೆ ಮಗು ಹಡೆದಳೆಂದು 'ಕಲ್ಲು ಹೊಡೆದು ಸಾಯಿಸುವಂತೆ' ನ್ಯಾಯಾಲಯ ತೀರ್ಪು ನೀಡುತ್ತದೆ.

ಇಂತಹ ವಿಪರ್ಯಾಸಗಳ ನಡುವೆಯೇ ಮೂರನೆ ಜಗತ್ತಿನ ಮಹಿಳೆಯರು ಇಂದು ಬದುಕುತ್ತಿದ್ದಾರೆ. ಅವರಿಗೆ ಮೂಲಭೂತ ಬದುಕುವ ಹಕ್ಕಿಲ್ಲ, ಆದರೆ ಸೌಂದರ್ಯ ಪ್ರದರ್ಶಿಸುವ, ಶ್ರೀಮಂತ ದೇಶಗಳ ಖಯಾಲಿಗಳನ್ನೆಲ್ಲ ಬೆನ್ನತ್ತುವ, ಬಹುರಾಷ್ಟ್ರೀಯ ಕಂಪನಿಗಳ ಸೌಂದರ್ಯ ಸಾಧನಗಳನ್ನು ಬಳಸುವ ಹಕ್ಕಿದೆ.

ಕಳೆದ ವರ್ಷ ಅಕ್ಟೋಬರ್ ತಿಂಗಳಲ್ಲಿ ಐದು ಮಕ್ಕಳ ತಾಯಿ, 35 ವರ್ಷದ ಸಫೈಯಾ ಹುಸೇನ್ ಎಂಬ ಮಹಿಳೆಗೆ ನೆರೆಮನೆಯ ವಿವಾಹಿತನೊಡನೆ ಲೈಂಗಿಕ ಸಂಪರ್ಕ ಬೆಳೆಸಿದ ಅಪರಾಧಕ್ಕೆ 'ಕುತ್ತಿಗೆವರೆಗೆ ನೆಲದಲ್ಲಿ ಹೂತ, ಕಲ್ಲು ಹೊಡೆದು ಕೊಲ್ಲಬೇಕೆಂಬ' ಶಿಕ್ಷೆ ವಿಧಿಸಲಾಗಿತ್ತು. ಅಂತರಾಷ್ಟ್ರೀಯ ಪ್ರತಿಭಟನೆಯ ನಡುವೆ, ಈ ವರ್ಷದ ಮಾರ್ಚ್ ತಿಂಗಳಲ್ಲಿ ಆಕೆಯ ಶಿಕ್ಷೆಯನ್ನು ರದ್ದು ಮಾಡುತ್ತಿದ್ದಂತೆಯೇ, ಮತ್ತೊಬ್ಬ ಮಹಿಳೆಗೆ ಅದೇ ಶಿಕ್ಷೆ ವಿಧಿಸಲಾಯಿತು. ಹುಸೇನಿ 'ತಾನು ಲೈಂಗಿಕ ಸಂಪರ್ಕ ಬೆಳೆಸಲಿಲ್ಲ, ಆತ ತನ್ನ ಮೇಲೆ ಅತ್ಯಾಚಾರ ಮಾಡಿದ' ಎಂದು ಎಷ್ಟೇ ಕೂಗಿ ಹೇಳಿದರೂ ಕೋರ್ಟು ಕೇಳಲಿಲ್ಲ, ಕಾರಣ ಅತ್ಯಾಚಾರ ಆಕೆಯ ಮೇಲೆ ನಡೆದಾಗ, ನಿಂತು ನೋಡಿದ ನಾಲ್ಕು ಮಂದಿ ಪ್ರತ್ಯಕ್ಷ ಸಾಕ್ಷಿಗಳನ್ನು ಆಕೆ ಎಲ್ಲಿಂದ ತಂದಾಳು. ಅತ್ಯಾಚಾರಿ ಕಾನೂನಿನ ಜರಡಿಯಲ್ಲಿ ಜಾರಿಕೊಳ್ಳುತ್ತಾನೆ, ಅತ್ಯಾಚಾರಕ್ಕೆ ಬಲಿಯಾದವಳಿಗೇ ಮರಣ ದಂಡನೆ.

ಈ ವರ್ಷ ನೈಜೀರಿಯಾದ ಕಟ್ಸಿನಾ ರಾಜ್ಯದ ಬಕೋರಿ ಎಂಬ ಹಳ್ಳಿಯ ನ್ಯಾಯಾಲಯ ಅಮೀನ ಎಂಬ ಮಹಿಳೆಗೆ ಮತ್ತೆ ಇಂತಹ ಕ್ರೂರ ಶಿಕ್ಷೆಯನ್ನು ವಿಧಿಸಿದೆ. ಅಂದಹಾಗೆ ಹುಸೇನಿಯ ಶಿಕ್ಷೆ ರದ್ದಾಗಿದ್ದು, ವಿಶ್ವದ ಆರು ಲಕ್ಷ ಜನರ ಸಹಿ ಹಾಕಿದ ಪ್ರತಿಭಟನೆಯಿಂದಾಗಿ ಅಲ್ಲ, ಶಿಕ್ಷೆ ಅಮಾನವೀಯ ಎಂಬ ಕಾರಣಕ್ಕೂ ಅಲ್ಲ, ಆಕೆ 'ಅಪರಾಧ'ವನ್ನು ಮಾಡಿದ ಸಮಯದಲ್ಲಿ ಮುಸ್ಲಿಂ ಶರಿಯತ್ ಕಾನೂನು ಜಾರಿಗೆ ಬಂದಿರಲಿಲ್ಲ ಎಂಬ ಕಾರಣಕ್ಕೆ. ಒಂದು ವರ್ಷದ ಕಡೆಯ ಮಗುವನ್ನು ಎತ್ತಿಕೊಂಡ ಹುಸೇನಿ ಸಂತಸದ ನಿಟ್ಟುಸಿರಿಡುತ್ತಿದ್ದಂತೆ, ಎಳೆಯ ಕೂಸನ್ನು ಹೆತ್ತ ಅಮಿನಾ ಭೀತಿಯಿಂದ ನಡುಗತೊಡಗಿದಳು.

ಅಮಿನಾ ಲಾವಲ್ ಕುರಾಮಿ, ವಿವಾಹದ ಹೊರಗೆ ಮಗುವನ್ನು ಹೆತ್ತಳು ಎಂದು ಆಕೆಗೆ ಕಲ್ಲು ಹೊಡೆದು ಸಾಯಿಸುವ ಮರಣ ದಂಡನೆ ವಿಧಿಸಲಾಯಿತು. ಆಕೆಯ ಈ 'ಅಪರಾಧ'ದಲ್ಲಿ ಪಾಲುಗೊಂಡ ಗಂಡಿಗೆ ಮಾತ್ರ ಯಾವ ದಂಡನೆಯೂ ಇಲ್ಲ.

ಮೂರು ವರ್ಷಗಳ ಹಿಂದೆ ಉತ್ತರ ನೈಜೀರಿಯಾದ ಅನೇಕ ರಾಜ್ಯಗಳು 'ಶಾರಿಯತ್' ಆಧರಿಸಿದ ಇಸ್ಲಾಮಿಕ್ ಕಾನೂನನ್ನು ವಿಪರೀತದ ಅರ್ಥದಲ್ಲಿ ಅಳವಡಿಸಿದವು. ಇದರ ಪ್ರಕಾರ ವಿವಾಹದ ಹೊರಗೆ ಲೈಂಗಿಕ ಸಂಬಂಧ ಬೆಳೆಸಿದ ಮಹಿಳೆಗೆ ಕಲ್ಲು ಹೊಡೆದು ಸಾಯಿಸುವ ಶಿಕ್ಷೆ ನೀಡಬೇಕು. ಗಂಡು ತಾನು 'ಲೈಂಗಿಕ ಸಂಪರ್ಕ' ಮಾಡಿಲ್ಲ ಎಂದು ಶಪಥ ಮಾಡಿದರೆ ಸಾಕು, ಅವನನ್ನು 'ನಿರ್ದೋಷಿ' ಎಂದು ಘೋಷಿಸಿ ಬಿಡುಗಡೆ ಮಾಡಲಾಗುತ್ತದೆ. ಅಮೀನಳ ಕೇಸಿನಲ್ಲಿ ಆಗಿರುವುದು ಇದೇ. ಮಗುವಿಗೆ ಆರು ತಿಂಗಳಾಗಿ ಎದೆಹಾಲು ಬಿಡಿಸಿದೊಡನೆ ಆಕೆಯನ್ನು ಶಿಕ್ಷೆಗೆ ಗುರಿ ಪಡಿಸುವಂತೆ ನ್ಯಾಯಾಂಗ ನಿರ್ದೇಶಿಸಿತು.

ಇದೆಂತಹ ನ್ಯಾಯ ನೋಡಿ, ಲೈಂಗಿಕತೆ ಅಪರಾಧವೆಂದರೆ, ಈ ಅಪರಾಧ ಗಂಡಿಲ್ಲದೆ ಜರಗುವುದಲ್ಲ. ಅನೇಕ ಬಾರಿ ಅತ್ಯಾಚಾರದ ಫಲವಾಗಿಯೂ ಹೆಣ್ಣು ಹಡೆದದ್ದಿದೆ. ಅತ್ಯಾಚಾರದ ಅಪರಾಧವನ್ನು ಗಂಡು ಮಾಡಿದರೂ, ಶಿಕ್ಷೆ ಮರಣ ದಂಡನೆ ಹೆಣ್ಣಿಗೆ. ಇದಕ್ಕಿಂತ ವಿಪರೀತದ ನ್ಯಾಯ ಬೇಕೆ? ನೈಜೀರಿಯಾದ ರಾಷ್ಟ್ರೀಯ ಸರಕಾರ ಕಲ್ಲು ಹೊಡೆದು ಸಾಯಿಸುವುದನ್ನು, ತಲೆ ಕಡಿಯುವುದನ್ನು, ಕೈ ಕಾಲು ಕತ್ತರಿಸುವುದನ್ನು ವಿರೋಧಿಸುತ್ತದೆ. ಹೀಗಿದ್ದೂ ಉತ್ತರ ನೈಜೀರಿಯಾದ ಹನ್ನೆರಡು ರಾಜ್ಯಗಳಲ್ಲಿ ಇವು ಆಚರಣೆಯಲ್ಲಿವೆ.

ಅಮೀನಳಿಗೆ ವಿಧಿಸಿರುವ ಶಿಕ್ಷೆ ಕೇವಲ ತಾರತಮ್ಯದಷ್ಟೇ ಅಲ್ಲ ಅಮಾನವೀಯವಾದದ್ದು ಎಂದು ಮಾನವತಾವಾದಿಗಳೆಲ್ಲ ಪ್ರತಿಭಟಿಸಿದ್ದಾರೆ. 'ಯು.ಎನ್.ಸಮಾವೇಶದಲ್ಲಿ' ಮಹಿಳೆಯರ ವಿರುದ್ಧದ ತಾರತಮ್ಯವನ್ನೆಲ್ಲ ನಿವಾರಿಸುತ್ತೇವೆ' ಎಂದು ಒಪ್ಪಿಕೊಂಡು ದೇಶ ಮಾತು ತಪ್ಪುತ್ತಿದೆ ಎಂದು ವಿಶ್ವದ ಪ್ರಜೆಗಳು ಕೂಗು ಹಾಕುತ್ತಿದ್ದಾರೆ.

ಆಫ್ರಿಕಾದ ಅತ್ಯಧಿಕ ಜನಸಂಖ್ಯೆಯ ಈ ದೇಶದಲ್ಲಿ ಅದಾಗಲೆ ಧರ್ಮದ ಹೆಸರಿನ ಗುದ್ದಾಟದಲ್ಲಿ ನೂರಾರು ಜನ ಇತ್ತೀಚಿನ ದಿನಗಳಲ್ಲಿ ಸತ್ತಿದ್ದಾರೆ. ಉತ್ತರದ ರಾಜ್ಯಗಳಲ್ಲಿಯ ಮುಸ್ಲಿಮರು, ದಕ್ಷಿಣ ರಾಜ್ಯಗಳ ಕ್ರಿಸ್ತ ಧರ್ಮದವರ ನಡುವೆ ಸದಾ ತಿಕ್ಕಾಟವಿದೆ. ಧರ್ಮದ ಹೆಸರಿನ ಕಾದಾಟದಲ್ಲಿ ನಲುಗುತ್ತಿರುವ ಈ ಬಡ ದೇಶದ ಮಹಿಳೆಯರಿಗೆ ಧರ್ಮದ ಹೆಸರಿನಲ್ಲಿ ಹಿಂಸೆ, ಅತ್ಯಾಚಾರ.

ಇದೀಗಷ್ಟೆ ಹೊರಬಿದ್ದಿರುವ ಸಂತಸದ ಸುದ್ದಿ ಅಮೀನಾಳಿಗೆ ರಕ್ಷಣೆ ನೀಡುವುದಾಗಿ ನೈಜೀರಿಯಾ ಸರಕಾರ ಹೇಳಿರುವುದು. ಅಂತೂ ಸೌಂದರ್ಯ ರಾಣಿಯಲ್ಲಿ ಕೆಲವರಾದರೂ ಮಾಡಿದ ಒಂದು ಉತ್ತಮ ಕೆಲಸವೆಂದರೆ, ಅಮೀನಳಿಗೆ ವಿಧಿಸಿದ ಶಿಕ್ಷೆಯನ್ನು ರದ್ದು ಮಾಡದಿದ್ದರೆ, ತಾವು ನೈಜೀರಿಯಾದಲ್ಲಿ ನಡೆಯುವ ವಿಶ್ವಸುಂದರಿ ಸ್ಪರ್ಧೆಯಲ್ಲಿ ಭಾಗವಹಿಸುವುದಿಲ್ಲ ಎಂದು ಘೋಷಿಸಿದ್ದು. ಡಿಸೆಂಬರ್ 7ರಂದು ಈ ಸ್ಪರ್ಧೆ ನಡೆಯಬೇಕಿದೆ. ಫ್ರಾನ್ಸ್, ಕೆನಡಾ, ಬೆಲ್ಜಿಯಂ, ಕೆನ್ಯಾ ಮತ್ತು ನಾರ್ವೆಯ ಸುಂದರಿಯರು ನೈಜೀರಿಯಾದಲ್ಲಿ ನಡೆಯುವ ವಿಶ್ವಸುಂದರಿ ಸ್ಪರ್ಧೆಗೆ ಬಹಿಷ್ಕಾರ ಹಾಕುವುದಾಗಿ ಘೋಷಿಸಿದ್ದರು. ಇದೀಗ ನೈಜೀರಿಯಾ ಸರಕಾರ 'ಅಮೀನಳನ್ನು ಖಂಡಿತವಾಗಿಯೂ ಕಲ್ಲು ಹೊಡೆದು ಸಾಯಿಸಲು ಬಿಡುವುದಿಲ್ಲ' ಎಂದು ವಚನ ನೀಡಿದೆ. ಸೌಂದರ್ಯ ಸ್ಪರ್ಧೆ ಮುಗಿದ ಮೇಲೂ ನೈಜೀರಿಯಾ ಸರಕಾರ ತನ್ನ ಮಾತು ಉಳಿಸಿಕೊಳ್ಳುತ್ತದೆಯೆ, ಕಾದು ನೋಡಬೇಕು!

◆

ಕಡೆಗೂ ಹುಟ್ಟುವನೆ ವಂಶೋದ್ಧಾರಕ?

ಏಷಿಯಾದ ದೇಶಗಳಲ್ಲಿ ಗಂಡು ಮಗುವನ್ನು ಕುರಿತ ವಿಪರೀತದ ಮೋಹ ತಿಳಿದದ್ದೆ. ಆದರೆ ಗಂಡು ಮಗುವಿಗಾಗಿ ನೀವು ಎಷ್ಟು ಬಾರಿ ಪ್ರಯತ್ನಿಸುವಿರಿ? ಎರಡು, ಮೂರು, ನಾಲ್ಕು, ಕಡೆಗೆ ಐದು ಹೆಣ್ಣು ಮಕ್ಕಳನ್ನು ಹೆತ್ತು, ಪ್ರಯತ್ನ ಕೈ ಬಿಟ್ಟವರನ್ನು ನೋಡಿದ್ದೇನೆ. ಆದರೆ ನೇಪಾಳದ ಹಾಜಿಪುರ್ ಗ್ರಾಮದ, 48 ವರ್ಷ ವಯಸ್ಸಿನ ಸುಭದ್ರ ಡಾಂಗಿ, ಗಂಡು ಮಗುವಿನ ಹಂಬಲದಲ್ಲಿ 19 ಹೆಣ್ಣು ಮಕ್ಕಳನ್ನು ಹೆತ್ತಿದ್ದಾಳೆ. ಅಲ್ಲಿಯೇ ಪ್ರಯತ್ನ ನಿಲ್ಲಿಸಿಲ್ಲ, ಇದೀಗ 20ನೇ ಬಾರಿ ಆಕೆ ಗರ್ಭವತಿ!

ವಿಶಿಷ್ಟ ಸೇನಾ ಪಡೆಗೆ - ಮಹಿಳಾ ಪ್ರವೇಶ

ದಿನದಿಂದ ದಿನಕ್ಕೆ ಮಹಿಳೆಯರು, ಎಲ್ಲ ರಂಗಗಳಲ್ಲಿ ಪ್ರವೇಶ ಪಡೆದು ಮುನ್ನುಗ್ಗುತ್ತಿರುವುದು ತುಂಬಾ ಖುಷಿಯ ವಿಷಯ. 1992ರಲ್ಲಿ ಭಾರತದ ಸೇನಾ ಪಡೆಯ ಹೆಣ್ಣು ಮಕ್ಕಳಿಗೆ ಬಾಗಿಲು ತೆರೆಯಿತು. ಪೋಲೀಸು ಪಡೆಯಲ್ಲಿ ಇಂದು ಸಾಕಷ್ಟು ಮಹಿಳೆಯರಿದ್ದಾರೆ. ಆದರೆ ಇಲ್ಲಿಯವರೆಗೂ 'ನ್ಯಾಷನಲ್ ಸೆಕ್ಯುರಿಟಿ ಗಾರ್ಡ್ಸ್' (ಎನ್.ಎಸ್.ಜಿ.) ಪೂರ್ಣ ಪುರುಷರ ಹಕ್ಕಿನ ರಂಗವಾಗಿತ್ತು. ಮಹಿಳೆಯರಿಗೆ ಪ್ರವೇಶವಿರಲಿಲ್ಲ. ಇದೀಗ ಮೊತ್ತ ಮೊದಲ ಬಾರಿಗೆ ಹಿಮಾಚಲ ಪ್ರದೇಶದ ಪೋಲಿಸ್ ಮಹಿಳೆ ಚಂದರ್ ಕಿರಣ್ ಎನ್.ಎಸ್.ಜಿ.ಗೆ ಪ್ರವೇಶ ಪಡೆದಿದ್ದಾರೆ. ಕೋರ್ಸ್ ಮುಗಿಸಿ ಈಕೆ ಪ್ರತಿಷ್ಠಿತ 'ಬ್ಲಾಕ್ ಕ್ಯಾಟ್' ತಂಡಕ್ಕೆ ಸೇರ್ಪಡೆಯಾಗುತ್ತಾರೆ. ಇಲ್ಲಿಯವರೆಗೂ ಮಿಲಿಟರಿ ರಂಗದಲ್ಲಿಯೇ 'ಸೂಪರ್ ಮೆನ್' ಎಂದು ಭಾವಿಸಿದ್ದ ಎನ್.ಎಸ್.ಜಿ. ತಂಡದ ತರಪೇತೆಲ್ಲ ಪುರುಷರಿಗೇ ಸೀಮಿತವಾಗಿತ್ತು. ಇಂದಿನ ಆತಂಕವಾದಿಗಳನ್ನು, ಅತ್ಯಾಧುನಿಕ ತಂತ್ರಜ್ಞಾನದಿಂದ ಸುಸಜ್ಜಿತರಾದ ಆತಂಕವಾದಿಗಳನ್ನು ತಡೆಗಟ್ಟಲು ಬೇಕಿರುವುದು ಅಷ್ಟಾಗಿ ದೈಹಿಕ ಶಕ್ತಿಯಲ್ಲ, ಧೈರ್ಯ, ದಿಟ್ಟತನ, ಜಾಣತನ, ನೈಪುಣ್ಯ, ಮಾನಸಿಕ ಗಟ್ಟಿತನ, ನಿಖರವಾಗಿ ಶೂಟ್ ಮಾಡಬಲ್ಲ ಸಾಮರ್ಥ್ಯ - ಇವು ಅಗತ್ಯವಾಗಿವೆ. ಇದನ್ನು ಮನಗಂಡು, ಮಹಿಳೆಯರಿಗೆ ಪ್ರವೇಶ ನೀಡಿರುವುದು ನಿಜಕ್ಕೂ ಸ್ವಾಗತಾರ್ಹ. ಹಾಗೆ ನೋಡಿದರೆ, 'ಎನ್.ಎಸ್.ಜಿ.ಗೆ ಮಹಿಳೆಯರನ್ನು ತೆಗೆದುಕೊಳ್ಳಬಾರದು' ಎಂದು ಎಲ್ಲಿಯೂ ಬರೆದಿಲ್ಲ. ಆದರೆ ಇಲ್ಲಿಯವರೆಗೂ ಅದು ಪುರುಷ ರಂಗ ಎಂದೇ ಭಾವಿಸಿ ಮುಂದುವರೆದಿತ್ತು. ಮೇಜರ್ ಜೆನರಲ್ ಎಮ್.ಕೆ. ಭಗತ್ ಅಂತಹ ಪುರೋಗಾಮಿ ಅಧಿಕಾರಿಗಳಿಂದಾಗಿ, ಇಂದು ಚಂದರ್ ಕಿರಣಗೆ ಪ್ರವೇಶ ದೊರೆತಿದೆ.

ಡಾ|| ಎಸ್. ಎಲ್. ಭೈರಪ್ಪನವರ 'ಮಂದ್ರ'ದ ಮಹಿಳೆಯರು

- ಶಾಂತಾನಾಗರಾಜ್

ಕೆಲವು ದಿನಗಳ ಹಿಂದೆ ಶ್ರೀಮತಿ ಟಿ. ಸುನಂದಮ್ಮ, ಎಚ್.ಎಸ್. ಪಾರ್ವತಿ, ಸರೋಜಾ ನಾರಾಯಣರಾವ್, ಡಾ|| ಎಲ್. ಜಿ. ಸುಮಿತ್ರ ಮುಂತಾದ ಹಿರಿಯ ಲೇಖಕಿಯರೂ, ಡಾ|| ಮಂಗಳಾ ಪ್ರಿಯದರ್ಶಿನಿ, ವೈ.ಕೆ. ಸಂಧ್ಯಾಶರ್ಮ ಇನ್ನೂ ಮುಂತಾದ ಸುಮಾರು 30 ಜನ ಲೇಖಕಿಯರು 'ಮಂದ್ರ' ಕುರಿತಾದ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲು ಸಭೆ ಸೇರಿದ್ದರು. ಅಂದು ಈ ಕಾದಂಬರಿಯ ಕಥೆ ಹಾಗೂ ಅದರ ಸಂಗೀತ ಭಾಗಗಳ ಬಗ್ಗೆ ಸಾಕಷ್ಟು ವಿಚಾರ ವಿನಿಮಯವಾಯಿತು. ಮಂದ್ರದ 'ಮಹಿಳಾ ಪಾತ್ರಗಳು ವಾಸ್ತವವಾಗಿಲ್ಲ' ಎನ್ನುವುದು ಎಲ್ಲ ಲೇಖಕಿಯರ ನಿಲುವಾಗಿತ್ತು. ಕೆಲವು ಮಾತ್ರ 'ಬಿಟ್ಟ ಗಂಡನ ಹಣದ ಹಂಗನ್ನೂ ತಿರಸ್ಕರಿಸಿದ ರಾಮಕುಮಾರಿಯ ಕೆಚ್ಚನ್ನು' ಮೆಚ್ಚಿಕೊಂಡರು.

ಭೈರಪ್ಪನವರು ಪರ್ವದ ನಂತರದ ಕಾದಂಬರಿಗಳಲ್ಲಿ ಅಂತರ್ಮುಖತೆಗೆ ಹೆಚ್ಚು ಒತ್ತು ಕೊಡುತ್ತಾರೆ ಮತ್ತು 'ಕಾಮ' ಅವರ ಇತ್ತೀಚಿನ ಕಾದಂಬರಿಗಳ ಮುಖ್ಯ ಕಾಳಜಿಯಾಗಿದೆ. ಕಾಮದ ಬೆನ್ನಿಗೇ ಅಂಟಿಕೊಂಡ ಕ್ರೌರ್ಯ ಸಹ ಅಗತ್ಯದ ಸ್ವಭಾವವೇನೋ ಎನ್ನುಷ್ಟರ ಮಟ್ಟಿಗೆ ಇವರ ಪಾತ್ರಗಳಿಗೆ ಅಂಟಿಕೊಂಡು ಬಿಡುತ್ತದೆ. ಪಾತ್ರಗಳು ಅದು ಹೆಣ್ಣಾಗಲೀ ಗಂಡಾಗಲೀ ಕಾಮದ ನೆಲೆಯ ಮೇಲೆ ರೂಪುಗೊಳ್ಳುವುದರಿಂದ ಅವುಗಳಲ್ಲಿ ಸ್ವಾರ್ಥ, ಕೋಪ, ಸಣ್ಣತನ, ಇಂಥ ಸ್ವಭಾವಗಳೇ ತುಂಬಿಕೊಂಡು ಬಿಡುತ್ತದೆ. 'ಆರ್ದ್ರತೆ' ಎನ್ನುವುದು ಲವಲೇಶವೂ ಇಲ್ಲದಾಗ ಯಾವ ಪಾತ್ರವೂ ಆಪ್ತವಾಗುವುದಿಲ್ಲ. ಇವತ್ತಿಗೂ ಶಿವರಾಮಕಾರಂತರ 'ಮರಳಿ ಮಣ್ಣಿಗೆ'ಯ ಮಹಿಳೆಯರು 'ಮೈಮನಸುಗಳ ಸುಳಿಯಲ್ಲಿ' ಯಲ್ಲಿನ ಮಂಜು, 'ಸನ್ಯಾಸಿಯ ಬದುಕು' ವಿನಲ್ಲಿನ ಪಕ್ಕದ ಮನೆ ಮಡಿ ಹೆಂಗಸು, ತ್ರಿವೇಣಿಯವರ ಕಾಶಿಯಾತ್ರೆಯ ಅಜ್ಜಿ, ಮಾಸ್ತಿಯವರ ಚಿಕವೀರ ರಾಜೇಂದ್ರದ ಚೆನ್ನಮ್ಮಾಜಿ, 'ಶೇಷಮ್ಮದ ಶೇಷಮ್ಮ, ನೆನೆಸಿ ಕೊಂಡಾಗೆಲ್ಲ ಮನಸಿಗೆ ತಂಪನ್ನೀಯುತ್ತಾರೆ. ಕಾರಣ ಈ ಪಾತ್ರಗಳಲ್ಲಿ ತುಂಬಿರುವ ಕರುಣೆ ಹಾಗೂ ಔದಾರ್ಯದ ಸ್ವಭಾವದಿಂದಾಗಿ. ಒಂದು ಸಾಹಿತ್ಯ ಕೃತಿಯಿಂದ ಮನುಷ್ಯ ಬಯಸುವುದು ಆರ್ದ್ರತೆ ತುಂಬಿದ ಔದಾರ್ಯ ಗುಣಗಳನ್ನೇ ವಿನಃ ಕ್ರೌರ್ಯ ತುಂಬಿದ ಸ್ವಾರ್ಥವನ್ನಲ್ಲ. ಅನೈತಿಕತೆ ಎಂದಿಗೂ ಖುಷಿಯನ್ನೂ ತರುವುದಿಲ್ಲ.

ಲೈಂಗಿಕ ಅಶಿಸ್ತು ಭೈರಪ್ಪನವರ ಕಾದಂಬರಿಗಳಲ್ಲಿ ಧಾರಾಳವಾಗಿ ತುಂಬಿರುತ್ತದೆ. ಅದರಲ್ಲೂ ಇತ್ತೀಚಿನ ಕಾದಂಬರಿಗಳಲ್ಲಿ ಈ ಅಶಿಸ್ತಿನದೇ ಪಾರುಪತ್ಯ. 'ಮಂದ್ರ' ಸಹ ಇದಕ್ಕೆ ಹೊರತಾಗಿಲ್ಲ. ಪ್ರಾರಂಭದಲ್ಲಿ ಬರುವ ಪಾತ್ರ 'ಚುನ್ನಿ' ಎನ್ನುವ ವಿವಾಹಿತ ತರುಣಿ. ಗಂಡನಿಂದ ಮಕ್ಕಳಾಗುವುದಿಲ್ಲ ಎನ್ನುವ ತಿಳುವಳಿಕೆ ಉಳ್ಳ ಹಳ್ಳಿಯ ಅವಿದ್ಯಾವಂತ ಹೆಣ್ಣು ನಾಯಕ ಮೋಹನಲಾಲನ ಕಾಮಾಹ್ವಾನಕ್ಕೆ ನಿರಾತಂಕವಾಗಿ ಒಪ್ಪಿಬಿಡುತ್ತಾಳೆ. ಇವನಿಂದ 'ಮಗು'ವಾದಾಗ ಸಂಭ್ರಮಿಸುತ್ತಾಳೆ. ಈ ಕಾಮದ ನೆಲೆಯೂ ಮಗುವನ್ನು ಪಡೆಯುವ ಸ್ವಾರ್ಥವೇ.

ಮಧುಮಿತಾ ಶ್ರೀಮಂತ ಮನೆತನದ ತರುಣಿ ಮೋಹನಲಾಲನ ಸಂಗೀತಕ್ಕೆ ಮಾರುಹೋದವಳು, ಅವನ ಶಿಷ್ಯೆ. ತನ್ನ ತಂದೆಯ ವಯಸ್ಸಿನ ಗುರುವಿನೊಂದಿಗೆ ಅನೈತಿಕ ಸಂಬಂಧ. ವಿದೇಶದ ವಿಕ್ರಮ್ ಷಾನೊಂದಿಗೆ ಮದುವೆ. ಅಮೆರಿಕಾಗೆ ಗುರುವನ್ನು ಕರೆಸಿಕೊಳ್ಳುವುದು ಅಲ್ಲಿ ಗುರು ಮತ್ತೆ ಇವಳ ಸಂಗಸುಖ ಬಯಸುವುದು. ಇವಳು ಸಮ್ಮತಿಸಿದರೂ ಪಾಪಪ್ರಜ್ಞೆಯಿಂದ ಗಂಡನಿಗೆ ಪತ್ರದಲ್ಲಿ ತಿಳಿಸಿ, ಭಾರತಕ್ಕೆ ಬಂದು ಗುರುವಿಗೇ ತನ್ನನ್ನು ಸಮರ್ಪಿಸಿಕೊಂಡು (!!) ನಿರಂತರವಾಗಿ ಇಲ್ಲೇ ಉಳಿದು ಸಂಗೀತ ಸಾಧನೆಗಾಗಿ ಹಾತೊರೆಯುವುದು. ಗುರು ಅಸಮ್ಮತಿ ತೋರಿದಾಗ ಮತ್ತೊಬ್ಬ ಹಾರ್ಮೋನಿಯಂ ಮಾಸ್ತರ ಹತ್ತಿರ ಸಂಗೀತ ಸಾಧನೆ ಮಾಡುವುದು. ಬರೀ ಅವಾಸ್ತವಗಳಿಂದಲೇ ಕೂಡಿದ ಮಧುಮಿತಾ ಪಾತ್ರ ಈ ಕಾಲಕ್ಕಂತೂ ಏನೇನೂ ಹೊಂದುವುದಿಲ್ಲ. ಕೊನೆಯಲ್ಲಿ ಸಭ್ಯರೀತಿಯಲ್ಲಿ ಬೇರೆ ಗುರುವನ್ನು ಹುಡುಕಿಕೊಂಡಂತೆ ಮೊದಲಲ್ಲೇ ಅವಳು ಮಾಡಬಹುದಿತ್ತಲ್ಲ ಎಂದು ಓದುಗನಿಗೆ ಅನಿಸಿದರೆ ಅದು ಓದುಗನ ತಪ್ಪಲ್ಲ. ಈ ಕಾಲದಲ್ಲಿ ಶೀಲ ಎನ್ನುವ ಪರಿಕಲ್ಪನೆಯೇ ಬೇರೆ ಬೇರೆ ಆಯಾಮಗಳನ್ನು ಪಡೆದಿದೆ. ಈ ಮಹಿಳೆಯಾದರೋ ಮದುವೆಗೆ ಮುನ್ನಿನ ಗುರುವಿನೊಂದಿಗಿದ್ದ, ತಾನು ಬಯಸದೇ ಆದ ಸಂಬಂಧವನ್ನು 18ನೇ ಶತಮಾನದ ಗೊಡ್ಡು ಚಿಂತಕರಂತೆ ಗಂಡನಿಗೆ ಪತ್ರದಲ್ಲಿ ನಿವೇದಿಸುತ್ತಾಳೆ. ಅಮೆರಿಕಾದಲ್ಲಿ ಒಂದೆರೆಡು ದಶಕಗಳಿಂದಲೇ ಮದುವೆ ಎನ್ನುವ ಬಂಧನವನ್ನು ತೂರೆದು, ಪರಸ್ಪರ ಒಪ್ಪಿಗೆಯ ಆಧಾರದ ಮೇಲೆ ಗಂಡು ಹೆಣ್ಣುಗಳ ಒಟ್ಟಿಗೆ ವಾಸ ಮಾಡುತ್ತಾ ಭಿನ್ನಾಭಿಪ್ರಾಯ ಬಂದರೆ ಸ್ನೇಹ ಮುರಿಯುತ್ತಾ ಮತ್ತೊಬ್ಬರೊಡನೆ ಹೊಸ ಸ್ನೇಹ ಕುದುರಿಸಿಕೊಳ್ಳುತ್ತಾ ಬಾಳುವ ರೀತಿ ಸಮಾಜಕ್ಕೂ ಒಪ್ಪಿತವೇ ಆಗಿಬಿಟ್ಟಿದೆ. ಇಂಥಾ ದೇಶದಲ್ಲಿ ಬಾಳುತ್ತಿರುವ ವಿಕ್ರಂ ಷಾ ಹೆಂಡತಿ ತಾನಾಗಿಯೇ ಹೇಳಿದ ಸತ್ಯ ಅರಗಿಸಿಕೊಳ್ಳಲಾರದೆ ಡೈವೋರ್ಸ್ ಮಾಡುವುದನ್ನು ಕಂಡಾಗ ಭೈರಪ್ಪನವರ ಸಾಮಾಜಿಕ ಪರಿಕಲ್ಪನೆಗಳು ಇನ್ನೂ ಐವತ್ತು ವರ್ಷ ಹಿಂದೆಯೇ ಉಳಿದುಬಿಟ್ಟಿದೆ ಏನೋ ಎನ್ನುವ ಅನುಮಾನವೂ ಬರುತ್ತದೆ.

ಚಂಪಾ ಎನ್ನುವ ಮೋಹನಲಾಲನ ಎರಡನೇ ಹೆಂಡತಿ, ಮನೋಹರಿ ದಾಸ್ ಎನ್ನುವ ನೃತ್ಯ ಕಲಾವಿದೆ ಮತ್ತು ಮೋಹನಲಾಲನ ಪ್ರೇಯಸಿ, ಈ ಎರಡೂ ಪಾತ್ರಗಳೂ ಅತಿರೇಕದ ಮುದ್ದೆಗಳು. ಚಂಪಾ ಕಿಲಾಡಿ ಹೆಣ್ಣು ಮೋಹನಲಾಲನನ್ನು ರಿಜಿಸ್ಟರ್ ಮದುವೆಯಾಗಿ, ಅವನನ್ನು ತನ್ನ ಹಿಡಿತದಲ್ಲಿಡುವ ಪ್ರಯತ್ನಮಾಡುತ್ತಾಳೆ. ಜೊತೆಯಲ್ಲೇ ಹಣದ ಮತ್ತು ಕೀರ್ತಿಯ ಬೆನ್ನು ಹತ್ತುವವಳು. ಅವಳು ಗಂಡ ದೂರಾದಾಗಲೂ ಅವನ ಹಣ ಮತ್ತು ಅವನ ಜನಪ್ರಿಯತೆಯನ್ನು 'ಎನ್‌ಕ್ಯಾಷ್' ಮಾಡಿಕೊಳ್ಳುವ ಕುತಂತ್ರ ಎರಡನ್ನೂ ಪಟ್ಟುಬಿಡದೆ ಸಾಧಿಸುತ್ತಾಳೆ. ಮನೋಹರಿದಾಸ್ ಪ್ರಸಿದ್ಧ ನೃತ್ಯ ಕಲಾವಿದೆ. ತನ್ನ ತಾತನ ವಯಸ್ಸಿನ ಗುರುವನ್ನು ಮದುವೆಯಾದವಳು ಮತ್ತು

ಕಾಮುಕ್ಕಾಗಿ ತನ್ನ ಶಿಷ್ಯರ ಬೆನ್ನು ಹತ್ತುವವಳು. ಈ ಎರಡೂ ಪಾತ್ರಗಳನ್ನು ಗಮನಿಸಿದಾಗ, ಮನುಷ್ಯ ಹೀಗೆ ಒಂದೇ ಸ್ವಭಾವಕ್ಕೆ ಒಂದೇ ರೀತಿಯ ಒತ್ತಡಕ್ಕೆ ಬಲಿಯಾಗುತ್ತಾ ಹೋಗುವುದು ಆರೋಗ್ಯ ಮನಸ್ಸಿನ ಲಕ್ಷಣವಲ್ಲವೆನಿಸುತ್ತದೆ. ಚಟಗಳಿಗೆ ಬಲಿಯಾದ, ಅದು ತೀವ್ರ ಸ್ವರೂಪದ ರೋಗಕ್ಕೆ ತಿರುಗಿದ ವ್ಯಕ್ತಿಯನ್ನೂ ರಿಹೆಬಿಟೇಶನ್ ಸೆಂಟರ್‌ಗಳಲ್ಲಿ ಅವನ ಇತರ ಸ್ವಭಾವಗಳನ್ನು ಜಾಗೃತಗೊಳಿಸಿ ಚಟವಿಲ್ಲದ ಬದುಕಿನ ಅರ್ಥಪೂರ್ಣತೆಯನ್ನು ಮನದಟ್ಟು ಮಾಡಿ ವಾಸಮಾಡುತ್ತಾರೆ. ಇನ್ನೂ ಹೀಗೆ ಸಾಧಾರಣ ವ್ಯಕ್ತಿಗಳು ಒಂದೇ ಸ್ವಭಾವಕ್ಕೆ ಜೋತುಬೀಳುವುದು ಸಹಜವೆನಿಸುವುದಿಲ್ಲ.

ರಾಮಕುಮಾರಿ ಎನ್ನುವ ಒಂದು ಮಹಿಳಾ ಪಾತ್ರವಿದೆ. ಈಕೆಯನ್ನು ಗಾಯಕ ಮೋಹನಲಾಲ ತಾನಿನ್ನೂ ಬಡತನದಲ್ಲಿರುವಾಗಲೇ (ಕಾಮದ ಉಪಶಮನಕ್ಕೆ ವೇಶ್ಯೆಯರ ಬಳಿ ಹೋದರೆ ರೋಗ ಬಂದೀತೆಂದು) ಮದುವೆಯಾಗುತ್ತಾನೆ. ಈಕೆ ವಿದ್ಯಾವಂತೆಯಲ್ಲ, ಬಡವಿ, ಸುಂದರಿಯೂ ಅಲ್ಲ. ಕೀರ್ತಿ ಮತ್ತು ಹಣದ ದಾರಿಯಲ್ಲಿ ಮೇಲೇರುತ್ತಾ ಹೋದಂತೆ ಚಂಪಳನ್ನು ಮದುವೆಯಾದ ಮೋಹನಲಾಲ ಇವಳನ್ನೂ ಬಿಟ್ಟು ಬಿಡುತ್ತಾನೆ. ಎರಡು ಮಕ್ಕಳ ತಾಯಿ ಉದರಂಭರಣಕ್ಕಾಗಿ ವಕೀಲರ ಮನೆಯಲ್ಲಿ ಅಡಿಗೆಯವಳಾಗಿ ಬದುಕು ಸಾಗಿಸುತ್ತಾಳೆ. ಮಗಳಿಗೆ ಮೂವತ್ತೆರಡು ವಯಸ್ಸಾದರೂ ಮದುವೆಮಾಡಲಾಗಿಲ್ಲ. ಮಗನಿಗೆ ವಿದ್ಯೆ ಮತ್ತು ಉದ್ಯೋಗ ಎರಡೂ ಕೈಗೆಟುಕಿಲ್ಲ. ಮಗಳು ತನ್ನ ಸಹೋದ್ಯೋಗಿಯನ್ನು ಮದುವೆಯಾಗಲು ಪ್ರಸಿದ್ಧ ಗಾಯಕ 'ಮೋಹನಲಾಲ' ತನ್ನ ತಂದೆ ಎನ್ನುವ ಹೆಮ್ಮೆಯನ್ನು ಬಳಸಿಕೊಳ್ಳಲು ಯತ್ನಿಸುತ್ತಾಳೆ. ಮೋಹನಲಾಲನೂ ವಿಷಯತಿಳಿದು ಹಣನೀಡಲು ಪ್ರಯತ್ನಿಸುತ್ತಾನೆ. ರಾಮಕುಮಾರಿಗೆ ನಿಂತ ಪೆಟ್ಟಿನಲ್ಲಿ ಮನೆಬಿಟ್ಟು ಹೋಗಿ ಇಷ್ಟು ವರ್ಷಗಳಾದರೂ ತಿರುಗಿ ನೋಡದ ಗಂಡನ ಮೇಲೆ ಸಹಜವಾಗಿಯೇ ಕೋಪವಿರುತ್ತದೆ. ಅವಳು ಹಣವನ್ನು ತಿರಸ್ಕರಿಸುತ್ತಾಳೆ, ಜೊತೆಗೆ ಗಂಡನನ್ನೂ. ಇಂಥ ಹಠದ ಸ್ವಭಾವಗಳು ಭೈರಪ್ಪನವರ ಅನೇಕ ಪಾತ್ರಗಳಲ್ಲಿ ಗಾಢವಾಗಿಯೇ ಇರುತ್ತವೆ. ಹಠ ಗುಣಾತ್ಮಕವಾಗಿದ್ದರೆ ಒಪ್ಪಬಹುದು. ಉದಾಹರಣೆಗೆ ಮೋಹನಲಾಲ ಕೊನೆಗೆ 'ತಾನು ಹರಿದ್ವಾರದಲ್ಲಿ ಸಂಗೀತಾಶ್ರಮ ಕಟ್ಟುವುದಾಗಿಯೂ ಅದಕ್ಕೆ ಜೊತೆಗೆ ಹೆಂಡತಿಯಾಗಿ ನೀನು ಬಾ' ಎಂದು ಕರೆದಾಗ ರಾಮಕುಮಾರಿ ತಿರಸ್ಕರಿಸುತ್ತಾಳೆ. ಇದು ಯಾವ ಹೆಣ್ಣಾದರೂ ಮಾಡುವ ಕೆಲಸವೇ. ಆದರೆ ಇದೇ ಹಠದ ಗುಣ ನೇತ್ಯಾತ್ಮಕವಾದಾಗ ಯಾರಿಗೂ ಪ್ರಯೋಜನವಿಲ್ಲ. ಉದಾಹರಣೆಗೆ ಮೂವತ್ತೆರಡು ವರ್ಷದ ಮಗಳು ಅಪ್ಪನ ಹೆಸರಿನ ಹೆಮ್ಮೆಯನ್ನು ಮದುವೆಗೆ ಬಳಸುತ್ತೇನೆಂದರೆ, ತಾಯಿಯಾದವಳಿಗೆ ಮಗಳ ಬದುಕು ಮುಖ್ಯವಾಗಬೇಕಿತ್ತು. ಆದರಿಲ್ಲಿ ಹಠ, ಕೋಪಗಳೇ ಬದುಕಿಗಿಂತ ಮುಖ್ಯವಾಗುತ್ತವೆ. ಇದರಿಂದ ರಾಮಕುಮಾರಿ ಏನು ಸಾಧಿಸಿದಳು ಎನ್ನುವ ಪ್ರಶ್ನೆ ಉತ್ತರ ಶೂನ್ಯ. ಮದುವೆಯಿಂದ ವಂಚಿತಳಾದ ಮಗಳು, ಅಪ್ಪ ಕೊಟ್ಟ ಲಕ್ಷ ಲಕ್ಷ ಹಣವನ್ನೂ ಜಾಣತನವಾಗಿ ವ್ಯಾಪಾರಕ್ಕೆ ಬಳಸಿಕೊಳ್ಳದೇ ಕಳೆದೇ ಬಿಡುವ ಮಗ, ಇವು ರಾಮಕುಮಾರಿಯ ಹಠದ ಪರಿಣಾಮಗಳು. ಈ ಅವಗಢಗಳಿಗೆ ಗಂಡನನ್ನೇ ದೂರುವ ರಾಮಕುಮಾರಿಯ ನಿಲುವು ಎಷ್ಟು ಸರಿ ಎನ್ನಿಸದೇ ಇರುವುದಿಲ್ಲ.

ಭೈರಪ್ಪನವರಿಗೆ ಮಹಿಳೆಯರ ಬಗ್ಗೆಯೇ, ಅದರಲ್ಲೂ ಉದ್ಯೋಗಸ್ಥೆಯರು, ಕಲಾವಿದೆಯರು, ಶ್ರೀಮಂತೆಯರು ಇಂಥ ಮಹಿಳೆಯರ ಬಗ್ಗೆ ಅನೇಕ ಪೂರ್ವಗ್ರಹಗಳಿವೆ ಎನಿಸುತ್ತದೆ. ಅವರ ಪಾತ್ರಗಳು ಆಡುವ ಕೆಲವು ಮಾತುಗಳು ಇದಕ್ಕೆ ಸಾಕ್ಷಿ. ''ಹೆಂಗಸರೇ ಹೀಗೆ ಒಂದು ಹದ ಇರೂದಿಲ್ಲ'' ''ಹೆಂಗಸರಿಗೇ ಬುದ್ಧಿ ಒಂದೇ ಸ್ಥಿಮಿತದಲ್ಲಿರುಲ್ಲ ಇದ್ದರೆ ಅವರ‍್ಯಾಕೆ ಹೆಂಗಸರಾಗಿರ್ತಿದ್ದರು'' ಮನಸ್ಸಿನೊಳಗನ್ನು ಎಂಥ ಸಮಯದಲ್ಲೂ ತೋರಿಸಿಕೊಳ್ಳದೇ ಇರುವುದು ಗಂಡಸರಿಗೆ ಮಾತ್ರ ಸಾಧ್ಯ'' ''ಹೆಂಗಸು ಗಂಡಸಿಗೆ ಬರೀ ಸ್ಫೂರ್ತಿ'' ''ಇಷ್ಟು ಧೈರ್ಯವಾಗಿ ಬಂದು ಇಷ್ಟು ಹತ್ತಿರ ಕುಳಿತು ಹೀಗೆ ದಿಟ್ಟಿಸಿ ನೋಡಬೇಕೆಂದರೆ ಬೇಕಾದಷ್ಟು ಚೆಂಗಲು ಹೊಡೆದಿರುವ ಹುಡುಗಿಯೇ ಇರಬೇಕು ಇಂಥೋಳು ಎಂಥ ಸ್ಫೂರ್ತಿ ಕೊಟ್ಟಾಳು'' ಇಂಥ ವಾಕ್ಯಗಳು ಮತ್ತು ಇದೇ ಇದೇ ಭಾವಗಳು ಮಂದ್ರದಲ್ಲಷ್ಟೇ ಅಲ್ಲ ಭೈರಪ್ಪನವರ ಇತರ ಕಾದಂಬರಿಗಳಲ್ಲಾ ಧಂಡಿಯಾಗಿ ಬರುತ್ತವೆ. ಲೈಂಗಿಕ ಕ್ರಿಯೆಯ ವಿಚಾರದಲ್ಲೂ ಅಷ್ಟೇ ಅವರ ಚಿಂತನೆ ಪುರುಷ ಪ್ರಧಾನವಾಗಿಯೇ ಇರುತ್ತದೆ. ಲೈಂಗಿಕತೆ ಎನ್ನುವುದು ಗಂಡು ಮತ್ತು ಹೆಣ್ಣಿಗೆ ಸಮಾನವಾದ ಅಗತ್ಯ. ಆದರೆ ಭೈರಪ್ಪನವರು ಚಿತ್ರಿಸುವುದು 'ಹೆಣ್ಣು ಸಮರ್ಪಿಸಿಕೊಳ್ಳುತ್ತಾಳೆ' ಎಂದೇ. ಇಂತಹ ಅತ್ಯಂತ ಖಾಸಗೀ ವಿಚಾರಗಳಲ್ಲಿಯೂ 'ಗಂಡೇ ಶ್ರೇಷ್ಠ' ಎನ್ನುವ ಪರಂಪರಾಗತ ಭಾವ. ಇಂಥ ಭಾವಗಳು ಅವೈಜ್ಞಾನಿಕ.

ಸಂಗೀತದ ಸುಖ ಎನ್ನುವುದು ಅದು ಕಲಾವಿದನಿಗೂ, ರಸಿಕನಿಗೂ ಒಂದು ಆಧ್ಯಾತ್ಮಿಕ ಸ್ತರಕ್ಕೇರಿಸುವ ಸಾಧ್ಯತೆಯುಳ್ಳದ್ದು ಬೇರೆ ಯಾವ ಕಲೆಯಲ್ಲೂ ಇಂಥ ಸ್ಪಿರಿಚುಯಲ್ ಡೈಮೆನ್‌ಶನ್ ಸಿಗುವುದಿಲ್ಲ ಎಂದು ಮನೋವಿಜ್ಞಾನಿಗಳು ಹೇಳುತ್ತಾರೆ. ಈಗಂತೂ ಸಂಗೀತದಲ್ಲಿ ಹಲವು ಹಿತವಾದ ರಾಗಗಳು ಎಂಥ ಮನೋವಿಕಾರವನ್ನೂ ಹಿಡಿತಕ್ಕೆ ತಂದು ಪ್ರಶಾಂತತೆಯನ್ನುಂಟು ಮಾಡುತ್ತವೆ ಎಂದು ಪ್ರಯೋಗಗಳಿಂದ ಸಿದ್ಧಮಾಡಿದ್ದಾರೆ. ಸಂಗೀತದ ಸುಖ ನಿಸ್ವಾರ್ಥದ ಫಳಿಗೆ. ಜೀವನದ ಸುಖದ ಅನುಭವವನ್ನು ಆನಂದಮಯವಾಗಿ ಪರಿವರ್ತಿಸಲು ಸಂಗೀತಕ್ಕೆ ಮಾತ್ರ ಸಾಧ್ಯ. ಆದರೆ ಮಂದ್ರದಲ್ಲಿ ಸಂಗೀತದ ಸುಖದ ಜೊತೆಯಲ್ಲೇ ಲೈಂಗಿಕ ಸೂಖವೂ ಯಾಕೆ ಥಳುಕು ಹಾಕಿ ಕೊಂಡಿದೆಯೋ? ಎನ್ನುವ ಬೇಸರದ ಪ್ರಶ್ನೆ ಏಳುತ್ತದೆ.

ಫ್ರೆಂಚ್ ಲೇಖಕ ಜೀನ್ ಪಾಲ್ ಸಾರ್ತ್ರ್ ಹೇಳುತ್ತಾನೆ ''ಸಾಹಿತ್ಯವೆಂದರೆ ಅದು ಅದರದೇ ಆದ ಒಂದು ಚಟುವಟಿಕೆ ಅಲ್ಲ ಅಥವಾ ಸಂದರ್ಭ ಹಾಗೂ ಪಾತ್ರಗಳ ವರ್ಣನೆಯಷ್ಟೇ ಅಲ್ಲ, ಅದು ಮಾನವನ ಸ್ವಾತಂತ್ರ್ಯ ಹಾಗೂ ಬದ್ಧತೆ. (ಜೊತೆಗೆ ಲೇಖಕನ ಬದ್ಧತೆ) ಸಾಹಿತ್ಯವೆಂದರೆ ಅದೊಂದು ಬದ್ಧತೆ. ಕಲಾತ್ಮಕ ಸೃಷ್ಟಿಯಾದ ಅದೊಂದು ನೈತಿಕ ಚಟುವಟಿಕೆ''

ಬರೀ ಕಾಮ, ಕ್ರೌರ್ಯವೇ ತುಂಬಿರುವ ನೈತಿಕತೆ ಯಾವ ಮಟ್ಟದಲ್ಲಿದೆ ಎನ್ನುವುದೇ ಪ್ರಶ್ನೆ.

◆

ನಿಮಗೆ ಗೊತ್ತೆ ''ಸ್ತ್ರೀ ಶಕ್ತಿ''ಯ ಅಗಾಧತೆ

ಸಶಕ್ತ ಸ್ವಾವಲಂಬಿ ಮಹಿಳಾ ಸಂಘಟನೆ ರೂವಾರಿ

ಹೌದು! ಕರ್ನಾಟಕ ಸರ್ಕಾರದ ಈ ಕ್ರಾಂತಿಕಾರಿ ಯೋಜನೆ ಇಡೀ ರಾಷ್ಟ್ರಕ್ಕೆ ಬಹು ದೊಡ್ಡ ಮಾದರಿ. ಗ್ರಾಮೀಣ ಮಹಿಳೆಯರಲ್ಲಿ ಆತ್ಮ ವಿಶ್ವಾಸ, ಆರ್ಥಿಕ ಸ್ಥಿರತೆ ಮತ್ತು ಆದಾಯ ತರುವ ಚಟುವಟಿಕೆಗಳಿಗೆ ನಾಂದಿ ಹಾಡುವ ಈ ಯೋಜನೆಯು ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿ ಸಾಧಿಸುತ್ತಾ ಸರ್ವಮಾನ್ಯವಾಗಿದೆ.

★ ಕರ್ನಾಟಕದಾದ್ಯಂತ 11.04 ಲಕ್ಷ ಮಹಿಳೆಯರನ್ನೊಳಗೊಂಡ 75,660 ಸ್ವ-ಸಹಾಯ ಗುಂಪುಗಳು ಕಾರ್ಯನಿರತ

★ 70,007 ಗುಂಪುಗಳು.ಬ್ಯಾಂಕ್ ಖಾತೆಗಳನ್ನು ಪಡೆದು 79.24ಕೋಟಿ ರೂಪಾಯಿಗಳ ಉಳಿತಾಯ ಸಾಧನೆ

★ ಜನರ ಬೆಂಬಲ ಹಾಗೂ ಸಹಭಾಗಿತ್ವದಿಂದಾಗಿ, ಸ್ತ್ರೀ ಶಕ್ತಿ ಸ್ವ-ಸಹಾಯ ಗುಂಪುಗಳು ಸಮಾಜದ ಸರ್ವತೋಮುಖ ಅಭ್ಯುದಯಕ್ಕಾಗಿ ಹಲವಾರು ರೀತಿಯಲ್ಲಿ ಕೊಡುಗೆ ಸಲ್ಲಿಸುತ್ತಿವೆ.

★ ಈಗಾಗಲೇ ರಚನೆಯಾಗಿರುವ ಸ್ವ-ಸಹಾಯ ಗುಂಪುಗಳನ್ನು ಬಲಪಡಿಸುವುದಕ್ಕೆ ಹೆಚ್ಚಿನ ಒತ್ತನ್ನು ನೀಡಲಾಗುತ್ತಿದೆ.

ಯೋಜನೆಯ ರೂಪುರೇಷೆಗಳು

★ ಬಡತನ ರೇಖೆಯ ಕೆಳಗೆ ಬದುಕುತ್ತಿರುವ, ಸಮಾನ ಮನಸ್ಕ 15-20 ಮಹಿಳೆಯರು ಸೇರಿ ತಮ್ಮ ಆರ್ಥಿಕ ಅಭಿವೃದ್ಧಿಗಾಗಿ ಸ್ವಇಚ್ಛೆಯಿಂದ ರಚಿಸಿಕೊಂಡ ಗುಂಪೇ - ಸ್ವಸಹಾಯ ಗುಂಪು.

★ ಪ್ರತಿಯೊಂದು ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಸ್ವಸಹಾಯ ಗುಂಪುಗಳ ರಚನೆ.

ಅರ್ಹತೆ

★ ಬಡತನ ರೇಖೆಗಿಂತ ಕೆಳಗೆ ಬದುಕುತ್ತಿರುವ ಗ್ರಾಮೀಣ ಮಹಿಳೆಯರಿಗೆ ಆದ್ಯತೆ

★ ಭೂರಹಿತ ಮಹಿಳಾ ಕೃಷಿ ಕಾರ್ಮಿಕರು, ಪರಿಶಿಷ್ಟ ಜಾತಿ ಅಥವಾ ವರ್ಗಕ್ಕೆ ಸೇರಿದ ಕುಟುಂಬದವರು, ಕುಡಿತಕ್ಕೆ ಬಲಿಯಾದ ಅಥವಾ ಅಂಗವಿಕಲ ವ್ಯಕ್ತಿ ಇರುವ ಕುಟುಂಬದ ಮಹಿಳೆಯರಿಗೆ ಆದ್ಯತೆ.

★ ಸ್ವಸಹಾಯ ಗುಂಪುಗಳು ತಮ್ಮ ಚಟುವಟಿಕೆಗಳನ್ನು ನಡೆಸಲು ಪ್ರಾರಂಭದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮಾರ್ಗದರ್ಶನ ನೀಡುತ್ತಾರೆ. ನಂತರ ಮೇಲುಸ್ತುವಾರಿಯನ್ನು ಸ್ವಸಹಾಯ ಗುಂಪುಗಳೇ ನೋಡಿಕೊಳ್ಳುವವು.

ಯೋಜನೆಯ ಧ್ಯೇಯೋದ್ದೇಶ

★ ರಾಜ್ಯದ ಎಲ್ಲಾ 176 ತಾಲ್ಲೂಕುಗಳಲ್ಲಿರುವ ಗ್ರಾಮಾಂತರ ಪ್ರದೇಶಗಳಲ್ಲಿ, ಒಂದು ಲಕ್ಷ ಸ್ವಸಹಾಯ ಗುಂಪುಗಳ ಮುಖಾಂತರ ಸುಮಾರು 20 ಲಕ್ಷ ಮಹಿಳೆಯರ ಸಂಘಟನೆ.

★ ಮಹಿಳೆಯರಿಗೆ ಆರ್ಥಿಕ ಪ್ರಗತಿಯ ಮೂಲಕ ಸಾಮಾಜಿಕ ಬದಲಾವಣೆಗೆ ಸೂಕ್ತ ವಾತಾವರಣವನ್ನು ಕಲ್ಪಿಸುವುದು.

★ ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ಮಹಿಳೆಯರನ್ನು ತೊಡಗಿಸುವದರ ಮೂಲಕ ಬಡತನ ರೇಖೆಯ ಕೆಳಗೆ ಬದುಕುತ್ತಿರುವ ಮಹಿಳೆಯರ ಆದಾಯವನ್ನು ಹೆಚ್ಚಿಸಿ, ಅವರಲ್ಲಿ ಆರ್ಥಿಕ ಸ್ಥಿರತೆಯನ್ನು ಮೂಡಿಸುವುದು, ತನ್ಮೂಲಕ ಸ್ವಾವಲಂಬಿಗಳನ್ನಾಗಿ ಮಾಡುವುದು.

★ ವಿವಿಧ ಇಲಾಖೆಗಳನ್ನು ಒಮ್ಮುಖಗೊಳಿಸುವುದರ ಮೂಲಕ ಸ್ವಸಹಾಯ ಗುಂಪುಗಳಿಗೆ ಅಭಿವೃದ್ಧಿ ಕಾರ್ಯಕ್ರಮಗಳ ಫಲ ದೊರೆಯುವಂತೆ ಅವಕಾಶ ಕಲ್ಪಿಸುವುದು ಹಾಗೂ ಸಾಲ ನೀಡುವಂತಹ ಸಂಸ್ಥೆಗಳಿಗೆ ಸಾಮೀಪ್ಯ ಒದಗಿಸುವುದು.

''ಸ್ತ್ರೀ ಶಕ್ತಿ'' - ಯೋಜನೆಯ ಸದುಪಯೋಗ ಪಡೆದುಕೊಳ್ಳಿ! ನೀವಿನ್ನೂ ''ಸ್ತ್ರೀ ಶಕ್ತಿ' ಯೋಜನೆಗೆ ಸೇರಿಲ್ಲವೆ? ಇಂದೇ ಸೇರಿ. ಸ್ವಸಹಾಯ ಗುಂಪಿನ ಸದಸ್ಯರಾಗಿ.

''ಸ್ತ್ರೀ ಶಕ್ತಿ'' - ಗ್ರಾಮೀಣ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಯ ತಾರಕ ಮಂತ್ರ.

- ಕರ್ನಾಟಕ ವಾರ್ತೆ

ಅನಿಷ್ಟಗಳು ಮರುಕಳಿಸುತ್ತಿವೆಯೇ?

ಕಳೆದ ಶತಮಾನದ ಆರಂಭದಲ್ಲಿ ಅಂದಿನ ಸಮಾಜಸುಧಾರಕರು ಮಹಿಳೆಯರ ಶಿಕ್ಷಣಕ್ಕಾಗಿ ಹೋರಾಡುವಾಗ ಬಾಲ್ಯವಿವಾಹ, ಸತಿ, ಕೇಶಮುಂಡನದಂತಹ ಅನಿಷ್ಟಗಳ ವಿರುದ್ಧವೂ ಹೋರಾಡಿದ್ದು ಇಂದಿನ ಇತಿಹಾಸದ ಪ್ರಮುಖ ಘಟ್ಟಗಳಾಗಿವೆ. ಆದರೆ ಒಂದು ನೂರು ವರ್ಷಗಳ ನಂತರವೂ ಇಂದೂ ಈ ಪದ್ಧತಿಗಳು ಕೆಲವಾದರೂ ಪ್ರದೇಶಗಳಲ್ಲಿ ಜೀವಂತವಾಗಿರುವುದು ಗಾಭರಿ ಹುಟ್ಟಿಸುವುದಲ್ಲದೆ ನಾಚಿಕೆಯ ವಿಷಯವೂ ಆಗಿದೆ. ಈ ವರ್ಷದ ಆರಂಭದಲ್ಲಿ ರಾಜಸ್ಥಾನದಂತಹ ಹಿಂದುಳಿದ ರಾಜ್ಯಗಳಿರಲಿ, ನಮ್ಮ ಕರ್ನಾಟಕದಲ್ಲೂ ಬಾದಾಮಿ ಜಿಲ್ಲೆಯಲ್ಲಿ ಹನ್ನೆರಡು ಜೋಡಿಯ ಬಾಲವಿವಾಹಗಳಾದದ್ದು ನಮಗಿನ್ನು ನೆನಪಿನಲ್ಲಿ ಹಸಿಯಾಗಿವೆ. ಈ ವಿವಾಹಕ್ಕೆ ಮುಖ್ಯಮಂತ್ರಿಗಳು, ಸಚಿವರು ಮತ್ತು ಧರ್ಮಗುರುಗಳು ಸಾಕ್ಷಿಯಾಗಿದ್ದಿದ್ದು ಸಮಸ್ಯೆಯ ಗಂಭೀರತೆಯನ್ನು ತೋರಿಸುತ್ತದೆ. ಕೆಲವು ತಿಂಗಳ ಹಿಂದೆ ಮಧ್ಯ ಪ್ರದೇಶದ ಪನ್ನಾಜಿಲ್ಲೆಯಲ್ಲಿ ಕುಟ್ಟುಬಾಯಿಯೆಂಬ ಅರವತ್ತರ ವೃದ್ಧೆ ಸತಿಯಾದದ್ದು ಎಲ್ಲರಿಗೂ ಗೊತ್ತಿರುವ ವಿಚಾರ.

ಈ ಸುದ್ದಿಗಳ ಹಿಂದೆ ಈಗ ಮತ್ತೊಂದು ಸುದ್ದಿ ಅಪ್ಪಳಿಸುತ್ತಿದೆ. ಕಳೆದು ತಿಂಗಳು ಕರ್ನಾಟಕದ ಶಹಾಪುರದಲ್ಲಿ ಬ್ರಾಹ್ಮಣ ವಿಧವೆಯೊಬ್ಬಳಿಗೆ ಅವಳ ಕುಟುಂಬದವರಿಂದ 'ಕೇಶಮುಂಡನ'ದ ಘೋರ ಕೃತ್ಯ ನಡೆದಿದೆ. ವಿಧವಾ ವಿವಾಹ ಕಾನೂನ ಬದ್ಧವಾಗಿರುವ ಇಂದಿನ ದಿನಗಳಲ್ಲಿ 'ಕೇಶಮುಂಡನ'ದಂತಹ ಅವಮಾನಕರ ಸಂಗತಿಗಳು ಹೆಣ್ಣಿನ ಮೂಲಭೂತ ಹಕ್ಕುಗಳ ಮೇಲೆ ನಡೆಸಿರುವ ಅಮಾನವೀಯ ಕೃತ್ಯಗಳಲ್ಲವೇ? ಶಹಾಪುರದ ಈ ಬ್ರಾಹ್ಮಣ ವಿಧವೆ ತನಗೆ ಕೇಶಮುಂಡನ ಬೇಡವೆಂದು ಎಷ್ಟೆಲ್ಲ ವಿರೋಧಿಸಿ, ಅತ್ತು ಕರೆದರೂ ಅವಳ ಇಚ್ಛೆಗೆ ವಿರುದ್ಧವಾಗಿ ಅವಳ ಮಗ ಅವಳನ್ನು ಕುರೂಪಗೊಳಿಸಿದ್ದು ಖಂಡಿತಾ ಶಿಕ್ಷಾರ್ಹವಾದ ಅಪರಾಧವಾಗಿದೆ. ಈ ದಿಕ್ಕಿನಲ್ಲಿ ಯಾವುದೇ ಕಾನೂನಿನ ಬೆಂಬಲವಿಲ್ಲದಿದ್ದರೂ ಹೆಣ್ಣಿಗೆ ನ್ಯಾಯ ಕೊಡಿಸುವತ್ತ ಸರ್ಕಾರ ಮತ್ತು ನ್ಯಾಯಾಂಗ ಯೋಚಿಸಬೇಕಿದೆ.

ಈ ಘೋರ ಕೃತ್ಯವನ್ನು ಖಂಡಿಸಿ ಆ ವೃದ್ಧೆಗೆ ನ್ಯಾಯ ದೊರಕಿಸುವಂತೆ ಮತ್ತು ಇಂತಹ ಕೃತ್ಯಗಳು ಮರುಕಳಿಸಿದಂತೆ ಜನ ಜಾಗೃತಿ ಮೂಡಿಸಲು ಬೆಳಗಾಂನ ಮಹಿಳಾ ಸಂಘಟನೆಗಳು ಮೆರವಣಿಗೆ ನಡೆಸಿ ಡೆಪ್ಯುಟಿ ಕಮೀಷನರ್‌ರವರಿಗೆ ಮನವಿ ಸಲ್ಲಿಸಿದವು. ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವಿಮೆನ್ ಸಂಘಟನೆಯ ನೇತೃತ್ವದಲ್ಲಿ ಮಹಿಳಾ ಜಾಗೃತಿ ಸಂಘಟನೆ, ಕರ್ನಾಟಕ ವಿಮೋಚನಾ ರಂಗ, ಮುಂಚಡಿ, ಮುಂತಾದ ಸಂಘಟನೆಗಳು ಮತ್ತು ನಾಯಕಿಯರಾದ ಪರಿಮಳಾ ವಿಜಯಕುಮಾರ್, ಮೀರಾ, ರೇಖಾ ಸರ್ವೆ, ರಾಜಶ್ರೀ, ಮಂಗಳೆ, ಸೈಮನ್ ತಹಶೀಲ್ದಾರ್ ಮುಂತಾದವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬದಲಾದ ಅತ್ಯಾಚಾರ ವಿರೋಧ ಕಾನೂನು

ಇಲ್ಲಿಯವರೆಗೂ ಸೆಕ್ಷನ್ 155, ಸಬಸೆಕ್ಷನ್ IVರ ಪ್ರಕಾರ, ಅತ್ಯಾಚಾರದ ಕೇಸುಗಳಲ್ಲಿ ಆರೋಪಿ, ಅತ್ಯಾಚಾರಕ್ಕೆ ಬಲಿಯಾದ ಹೆಣ್ಣಿನ ಶೀಲದ ಬಗ್ಗೆ ಪ್ರಶ್ನಿಸಬಹುದಿತ್ತು. ಈ ಮೂಲಕ ಅತ್ಯಾಚಾರಿ ಕಾನೂನಿನ ಜರಡಿಯಲ್ಲಿ ಜಾರಿಕೊಳ್ಳುತ್ತಿದ್ದ. ರಾಷ್ಟ್ರೀಯ ಮಹಿಳಾ ಆಯೋಗ, ಬಲಿಯಾದ ಹೆಣ್ಣಿನ ನಡತೆಗೂ, ಅತ್ಯಾಚಾರವಾದ ಘಟನೆಗೂ ಯಾವುದೇ ಸಂಬಂಧವನ್ನು ಕಲ್ಪಿಸಬಾರದು ಎಂದು ಒತ್ತಾಯಿಸಿತು. ಒಬ್ಬ ಹೆಣ್ಣು ವೇಶ್ಯೆಯೇ ಆದರೂ, ಯಾವ ಗಂಡಸಿಗೂ ಅವಳನ್ನು ಬಲಾತ್ಕಾರ ಮಾಡುವ ಹಕ್ಕಿಲ್ಲ. ಇದೀಗ ನವೆಂಬರ್ ಹನ್ನೆರಡನೇ ತಾರೀಖು ಕ್ಯಾಬಿನೆಟ್, 'ಇಂಡಿಯನ್ ಎವಿಡೆನ್ಸ್ ಆಕ್ಟ್'ನಲ್ಲಿ ಸುಧಾರಣೆ ತಂದು, ಸೆಕ್ಷನ್ 155ರ ಸಬ್-ಸೆಕ್ಷನ್ IVನ್ನು ತೆಗೆದುಹಾಕಿದೆ. ಇಷ್ಟೇ ಅಲ್ಲ 'ಸತಿ ಪದ್ಧತಿ ನಿಷೇಧ ಕಾನೂನಿ'ನಡಿ ಅಪರಾಧಿಯೆಂದು ನಿರ್ಣಯವಾದ ವ್ಯಕ್ತಿ ಯಾವ ಚುನಾವಣೆಯಲ್ಲಿಯೂ ಭಾಗವಹಿಸುವಂತಿಲ್ಲ ಎಂದೂ ತಿಳಿಸಿದೆ. ಇಲ್ಲಿಯವರೆಗೂ ಅಪರಾಧಿಯೆಂದು ಸಾಬೀತಾಗಿ, ಆರು ತಿಂಗಳು ಶಿಕ್ಷೆ ಅನುಭವಿಸಿ ಬಂದಾತ ಕೂಡಾ ಚುನಾವಣೆಗೆ ನಿಲ್ಲಬಹುದಿತ್ತು. ಕಾನೂನಿನ ಈ ಎರಡೂ ಸುಧಾರಣೆಗಳು ತುಂಬಾ ಸ್ವಾಗತಾರ್ಹವಾದುವು.

ಲೈಂಗಿಕ ಕಿರುಕುಳ - ಅನೇಕ ಮುಖಗಳು

ಭಾರತದ ಹೆಮ್ಮೆಯ ಕಂಪನಿ ಇನ್ಫೋಸಿಸ್ ಸದಾ ಸುದ್ದಿಯಲ್ಲಿರುವುದು ಹೊಸದಲ್ಲ. ಆದರೆ ಈ ಬಾರಿ ಇನ್ಫೋಸಿಸ್ ಸುದ್ದಿಯಾದದ್ದು ತಪ್ಪು ಕಾರಣಕ್ಕೆ. ಅಮೆರಿಕದಲ್ಲಿರುವ ಇನ್ಫೋಸಿಸ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ರೀಟಾ ಮ್ಯಾಕ್ಸಿಮ್ ತನ್ನ ಮೇಲಧಿಕಾರಿ ಫನೀಷ್ ಮೂರ್ತಿ ಹಾಗೂ ಇನ್ಫೋಸಿಸ್ ಕಂಪನಿಯನ್ನು ಲೈಂಗಿಕ ಕಿರುಕುಳದ ಆಪಾದನೆಯ ಮೇಲೆ ಕೋರ್ಟಿಗೆ ಎಳೆದಿದ್ದಾರೆ. ಫನೀಷ್ ಮೂರ್ತಿ ಸೇಲ್ಸ್ ಮತ್ತು ಮಾರ್ಕೆಟಿಂಗ್ ವಿಭಾಗದ ಮುಖ್ಯಸ್ಥರು. ಈತನ ಎಕ್ಸಿಕ್ಯುಟಿವ್ ಸಹಾಯಕಿಯಾಗಿ ರೀಟಾ ಕೆಲಸ ಮಾಡುತ್ತಿದ್ದರು. ಫನೀಷ್ ತಮಗೆ 'ಲೈಂಗಿಕ ಕಿರುಕುಳ ಕೊಟ್ಟು ತಾನೇಷ್ಟೇ ತಡೆದರೂ ದೈಹಿಕ ಸಂಬಂಧಕ್ಕೆ ಇಳಿಸಿದರೆಂದು' ಆಕೆಯ ದೂರು. ದೈಹಿಕ ಮತ್ತು ಮಾನಸಿಕ ಹಿಂಸೆಯಿಂದಾಗಿ ತಾನು ಕೆಲಸ ಬಿಟ್ಟುದಾಗಿ ಆಕೆ ಹೇಳಿದ್ದಾಳೆ. ಇದಾದ ಕೆಲವೇ ಸಮಯದಲ್ಲಿ ಫನೀಷ್ ಅವರು, ಈ ಕೇಸಿನ ವಿಷಯವಾಗಿ ಕೆಲಸ ಮಾಡಲು ತಮಗೆ ಸಮಯ ಬೇಕೆಂದು ಹೇಳಿ ರಾಜಿನಾಮೆ ನೀಡಿದ್ದಾರೆ. ರೀಟಾ ಅವರ ಕೇಸು ಮತ್ತೊಮ್ಮೆ ಉದ್ಯೋಗದ ಸ್ಥಳದಲ್ಲಿ ಮಹಿಳೆ ಎದುರಿಸುವ ಲೈಂಗಿಕ ಕಿರುಕುಳದ ವಿಷಯವನ್ನು ಚರ್ಚೆಗೆ ತಂದಿದೆ.

ಉದ್ಯೋಗ ರಂಗದಲ್ಲಿಯ ಲೈಂಗಿಕ ಕಿರುಕುಳಕ್ಕೆ ಅನೇಕ ಮುಖಗಳಿವೆ. ಲೈಂಗಿಕ ಕಿರುಕುಳ - ನಿರ್ದಿಷ್ಟ ಮಹಿಳೆಯನ್ನು ಕುರಿತು ಹಗುರವಾದ ಮಾತು, ಆಕೆಯ ಶೀಲದ ಬಗ್ಗೆ ಅಡ್ಡನುಡಿ, ಅಶ್ಲೀಲ ನೋಟ - ಇಷ್ಟಕ್ಕೆ ನಿಂತರಬಹುದು. ಇಲ್ಲ ಇದರಾಚೆಗೆ ಮುಂದುವರೆದು ಮೈ-ಕೈ ಮುಟ್ಟುವುದರಿಂದ ಆರಂಭಿಸಿ, ಮಾನಸಿಕ ಮತ್ತು ದೈಹಿಕ ಹಿಂಸೆಗೆ ಇಳಿದಿರಬಹುದು. ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ ಶೇಕಡಾ 50ರಷ್ಟು ಮಹಿಳೆಯರು ಲೈಂಗಿಕ ಕಿರುಕುಳವನ್ನು ಎದುರಿಸುತ್ತಿದ್ದಾರೆ. 1997ರಲ್ಲಿ ಸುಪ್ರೀಂಕೋರ್ಟ್ ವಿಶಾಖ ಕೇಸಿನಲ್ಲಿ ಮಹತ್ವದ ತೀರ್ಪನ್ನು ನೀಡಿ ಉದ್ಯೋಗದ ಸ್ಥಳಗಳಲ್ಲಿ ಮಹಿಳಾ ಕೆಲಸಗಾರರಿಗೆ ಆಗುವ ಲೈಂಗಿಕ ಕಿರುಕುಳವನ್ನು ತಡೆಗಟ್ಟಲು ಕೆಲವೊಂದು ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿಕೊಟ್ಟಿತು. ಪ್ರತಿಯೊಂದು ಕೆಲಸದ ಸ್ಥಳದಲ್ಲೂ ಒಂದು ಸೂಕ್ತ 'ದೂರು ವಿಚಾರಣಾ ಸಮಿತಿ' ಯನ್ನು ರಚಿಸಬೇಕು, ಅದರ ಅಧ್ಯಕ್ಷರು ಮಹಿಳೆಯಾಗಿರಬೇಕು. ಮೇಲಿನವರ ಒತ್ತಡ ಬೀಳದಂತೆ ಈ ಸಮಿತಿಯಲ್ಲಿ ಸ್ವಾಯತ್ತ ಸಂಸ್ಥೆಗಳ ಪ್ರತಿನಿಧಿ ಇರಬೇಕು ಎಂದೂ ಆದೇಶಿಸಿತು. ಆದರೆ ಇಂದು ಭಾರತದಲ್ಲಿ ಶೇಕಡಾ 20ರಷ್ಟು ಕಂಪನಿಗಳಷ್ಟೇ ಇಂಥಾ ಸಮಿತಿಗಳನ್ನು ನಿರ್ಮಿಸಿವೆ. ಇವು ಕೂಡಾ ಹೆಚ್ಚಾಗಿ ದೊಡ್ಡ ಕಂಪನಿಗಳು. ನೂರಾರು, ಸಾವಿರಾರು, ಸಣ್ಣ ಸಣ್ಣ ಕಂಪನಿಗಳು 'ತಮ್ಮಲ್ಲಿ ಲೈಂಗಿಕ ಕಿರುಕುಳವೇ ಇಲ್ಲ' ಎಂದು ನಂಬಿದಂತಿವೆ ಅಥವಾ ಅಂತಹ ಸಮಿತಿ ನಿರ್ಮಿಸುವುದು 'ತಮ್ಮಲ್ಲಿ ಲೈಂಗಿಕ ಕಿರುಕುಳವಿದೆ' ಎಂದು ಒಪ್ಪಿಕೊಂಡಂತೆ ಎಂದು ಭಾವಿಸಿದಂತಿದೆ.

ಲೈಂಗಿಕ ಕಿರುಕುಳ ಇಲ್ಲವೆಂದು ಕಣ್ಣುಮುಚ್ಚಿಕುಳಿತರೆ ಸಮಸ್ಯೆ ಮರೆಯಾಗುವುದಿಲ್ಲ. 'ಸಾಕ್ಷಿ' ಎಂಬ ಮಾನವ ಹಕ್ಕುಗಳ ಸಂಘವೊಂದು ಇತ್ತೀಚೆಗೆ ಒಂದು ಸಂಶೋಧನಾ ಅಧ್ಯಯನವನ್ನು ನಡೆಸಿತು. ಐದು ರಾಜ್ಯಗಳಲ್ಲಿ, ವಿವಿಧ ಕಾರ್ಯಕ್ಷೇತ್ರಗಳಲ್ಲಿ ದುಡಿವ ಗಂಡಸರು ಮತ್ತು ಹೆಂಗಸರನ್ನು ಪ್ರಶ್ನಿಸಿ ಸಂಗ್ರಹಿಸಿದ ಮಾಹಿತಿಯ ಪ್ರಕಾರ, ಶೇಕಡಾ 80ರಷ್ಟು ಜನ ತಮ್ಮ ಕಾರ್ಯಕ್ಷೇತ್ರದಲ್ಲಿ ಲೈಂಗಿಕ ಕಿರುಕುಳವಿದೆ ಎಂದು ತಿಳಿಸಿದ್ದಾರೆ. ಶೇಖಡಾ 49ರಷ್ಟು ಮಂದಿ, ಅಂತಹ ಲೈಂಗಿಕ ಕಿರುಕುಳವನ್ನು ಅನುಭವಿಸಿದ್ದಾಗಿ ತಿಳಿಸಿದ್ದಾರೆ. ಶೇಖಡಾ 58ರಷ್ಟು ಮಂದಿಗೆ ಸುಪ್ರೀಂಕೋರ್ಟಿನ ತೀರ್ಪಿನ ಬಗ್ಗೆ ಏನೇನೂ ಗೊತ್ತಿಲ್ಲ!

ಬಹಳಷ್ಟು ಬಾರಿ ಈ ಲೈಂಗಿಕ ಕಿರುಕುಳ ಅತ್ಯಂತ ಗೋಪ್ಯವಾಗಿ ಅನುಭವಿಸುವವರಿಗೆ ಮಾತ್ರ ಗೊತ್ತಿರುವಂತಹುದು. ಸರಕಾರಿ ಕಛೇರಿಯೊಂದರಲ್ಲಿ ನನಗೆ ನಿಕಟವಾಗಿ ಪರಿಚಯವಿರುವ ನನ್ನ ಗೆಳತಿ ದುಡಿಯುತ್ತಿದ್ದಾಳೆ. ಆಕೆ ವಿವಾಹಿತೆ, ವಯಸ್ಸು ಸುಮಾರು 40. ಹದಿನೈದು ವರ್ಷಗಳಿಂದ ಆತನನ್ನು ನೋಡಿದ್ದಾಳೆ, ಸುಮಾರು 55 ವರ್ಷ ವಯಸ್ಸಿನ ಆತ ಬೇರೆ ವಿಭಾಗದಲ್ಲಿದ್ದ ಕಾರಣ, ಕೆಲಸದ ರಂಗದಲ್ಲಿ ನೇರ ಒಡನಾಟವಿರಲಿಲ್ಲ. ಭಾರಿ ದೊಳ್ಳು ಹೊಟ್ಟೆಯ, ಒಂದು ಬಗೆಯ ಕಜ್ಜಿಯಂತಹ ಚರ್ಮರೋಗದಿಂದ ಸದಾ ನರಳುತ್ತಿದ್ದ ಈ ವಿವಾಹಿತ, ಮೂರು ಮಕ್ಕಳ ತಂದೆಯ ಬಗ್ಗೆ ಯಾರ ಗಮನವೂ ಹರಿದಿರಲಿಲ್ಲ. ಕಛೇರಿಯಲ್ಲಿ ಎಂದೂ ಈತ ತಪ್ಪಿ ನಡೆದ ಸಂದರ್ಭಗಳಿರಲಿಲ್ಲ. ಹೀಗಿರುವಾಗ, ಒಂದು ಬಾರಿ ಹೊರ ಊರಿನ ಕೆಲಸಕ್ಕೆ ಕಛೇರಿಯ ಇಡೀ ತಂಡ ಹೋಗಬೇಕಾಗಿ ಬಂದಿತ್ತು. ನನ್ನ ಗೆಳತಿಯೂ ಸೇರಿದಂತೆ ಎಲ್ಲರೂ ಒಂದು ಗೊತ್ತಾದ ಗೆಸ್ಟ್‌ಹೌಸಿನಲ್ಲಿ ಉಳಿದಿದ್ದರು. ರಾತ್ರಿಯ ಹೊತ್ತಿನಲ್ಲಿ ಏನೋ ನೆಪ ಹೇಳಿ ಬಾಗಿಲು ಬಡಿದು ಆತ ಒಳ ನುಗ್ಗಿದಾಗ, ಆತನ ಒಳಗಿದ್ದ ಅತ್ಯಂತ ಕೊಳಕು ಮುಖ ಪರಿಚಯವಾಗಿ ನನ್ನ ಗೆಳತಿಗೆ ಆಘಾತ. ಒಂದು ಕಡೆ 'ಇಷ್ಟು ವಯಸ್ಸಾದ ಪಾಪದ ವ್ಯಕ್ತಿಯಂತೆ ಕಂಡ ಈತ ಹೀಗೆ ವರ್ತಿಸಬಹುದೆ' ಎಂಬ ಶಾಕ್. ಇನ್ನೊಂದು ಕಡೆ, 'ಅಬ್ಬಾ ಈ ಗಂಡಸಿನ ಕೊಬ್ಬಾದರೂ ನೋಡು, ಇವನ ವಯಸ್ಸೇನು, ಧಡೂತಿ ಹೊಟ್ಟೆ, ಕಜ್ಜಿ ನಾಯಿಯಂತಹ ಶರೀರ ಇಟ್ಟುಕೊಂಡೂ, ವಿವಾಹಿತ, ಸಂಸಾರಸ್ಥೆಯಾದ ತಾನು ಪುಕ್ಕಟ್ಟೆ ಸಿಗುತ್ತಾಳೆ' ಎಂದು ಬಂದದ್ದು ತಿಳಿದು ತನ್ನ ಗೆಳತಿಗೆ ರೇಗಿ ಹೋಗಿತ್ತು. ಹಿಂತಿರುಗಿದ ಮೇಲೂ ಪತ್ರ ಬರೆದು ಏನೆಲ್ಲ ಕಿರುಕುಳ ಕೊಟ್ಟ, ಉರಿದುರಿದು ಬಿದ್ದು ವಾಚಾಮಗೋಚರ ಬೈದರೂ, ನನ್ನ ಗೆಳತಿ ಅವನ ವಿರುದ್ಧ ದೂರು ಕೊಡಲು ಹೋಗಲಿಲ್ಲ.

ಸಾಕಷ್ಟು ಹತ್ತಿರದಿಂದ ಈ ಮಹಿಳೆಯನ್ನ ಬಲ್ಲೆ. ಗಟ್ಟಿಗಿತ್ತಿ ಹೆಣ್ಣು. ಈಕೆ ಯಾಕೆ ದೂರು ಕೊಡಲಿಲ್ಲ ಯೋಚಿಸಿದ್ದೇನೆ. ಅದರಲ್ಲೂ ಆತನ ಹಸ್ತಾಕ್ಷರ, ಮುಂತಾದ ದಾಖಲೆಗಳು ಅವಳ ಬಳಿ ಇದ್ದರೂ ದೂರು ಕೊಡಲಿಲ್ಲ. ದೂರು ಕೊಟ್ಟರೆ, ಆ ವಿಷಯ ಮನೆಗೂ ತಲುಪುತ್ತದೆ ಎಂದು ತಿಳಿದಿತ್ತು.

ವಿವಾಹಿತರಿಗೆ ತಾವು ಅನುಭವಿಸುವ ಕಿರುಕುಳದ ಬಗ್ಗೆ ಮನೆಯಲ್ಲಿ ಹೇಳಲು ಭಯ. 'ನೀನೇ ಎಲ್ಲೋ ಚೆಲ್ಲುಚೆಲ್ಲಾಗಿ ವರ್ತಿಸಿರಬೇಕು' ಎಂದು ಅನುಮಾನಿಸುವ ಗಂಡಂದಿರು. 'ಕೆಲಸ ಬಿಡು' ಎಂದುಬಿಡಬಹುದಾದ ಮನೆಯವರ ಆತಂಕ. ಅವಿವಾಹಿತರಿಗೆ ದೂರು ಕೊಡಲು ಮತ್ತಷ್ಟು ಮಾನಸಿಕ ಅಡತಡೆಗಳು. 'ತನ್ನತ್ತ ಎಲ್ಲರ ಗಮನ ಹರಿಯುವುದು, ಅವಿವಾಹಿತಳಾದ ಕಾರಣ ಗುಮಾನಿಯಿಂದ ನೋಡಲೂ ಬಹುದು. ಆತ ತನ್ನ ಬಚಾವಿಗೆ ಬಾಯಿಗೆ ಬಂದದ್ದು ಹೇಳಿ ಬಿಡಬಹುದು. ನನ್ನ ಶೀಲದ ಬಗ್ಗೆಯೇ ಶಂಕೆ ಶುರುವಾಗಿ ಮದುವೆ ಕಷ್ಟವಾಗಬಹುದು' ಎಂಬೆಲ್ಲ ಹಿಂಜರಿಕೆ.

ಎರಡು ವರ್ಷಗಳ ಹಿಂದೆ ವಿಭಾ 'ಡಾಟ್ ಕಾಮ್ ಕಂಪನಿ'ಯೊಂದರಲ್ಲಿ ದುಡಿಯುತ್ತಿದ್ದಳು. ಕೈತುಂಬಿ ತುಳುಕುವಷ್ಟು ಸಂಬಳ. ಅಸೂಯೆ ಪಡುವಂತಹ ಕೆಲಸ. ಆದರೆ ಒಂದು ದಿನ ಈಕೆಯ ಬಿಗ್ ಬಾಸ್ - ವಿವಾಹಿತ ಗೌರವಾನ್ವಿತ ವ್ಯಕ್ತಿ ಈಕೆಯನ್ನು ಸಂಜೆ 'ಡಿನ್ನರ್'ಗೆ ಆಹ್ವಾನಿಸಿದ. ಆತ ಕಛೇರಿಯಲ್ಲಿ ಸಾಕಷ್ಟು ಸರಳ ಮತ್ತು ಸ್ನೇಹಮಯಿ ವ್ಯಕ್ತಿಯಾಗಿ ಕಂಡು ಬಂದವ. ಅಷ್ಟು ವಯಸ್ಸಾದ ಹಿರಿಯ ಅಧಿಕಾರಿ ಡಿನ್ನರಿಗೆ ಕರೆದಾಗ, ವಿಭಾಗೆ ಕೊಂಚ ವಿಚಿತ್ರ ಎನಿಸಿದರೂ, ತಪ್ಪು ತಿಳಿಯಲಿಲ್ಲ, ಊಟಕ್ಕೆ ಹೋದಳು. ಹೋಟಲೊಂದರಲ್ಲಿ ರಾತ್ರಿ ಊಟವಾದ ಮೇಲೆ ಆತ 'ತನ್ನ ಮನೆಗೆ ಹೋಗೋಣ, ನನ್ನ ಪತ್ನಿ ಊರಿನಲ್ಲಿಲ್ಲ, ಎಂದಾಗ ಮಾತ್ರ ಹೌಹಾರಿದಳು. 'ತಡವಾಗಿದೆ, ತಾನು ಬೇಗ ಮನೆಗೆ ಹೋಗಬೇಕು' ಎಂದು ಹೇಳಿ ಆತನ ಮನೆಯ ಆಹ್ವಾನವನ್ನು ನಿರಾಕರಿಸಿದಳು. ಆತನು ಏನೂ ಹೇಳಲಿಲ್ಲ. ಒತ್ತಾಯಿಸಲಿಲ್ಲ. ಆದರೆ ಆಪ್ತವಾಗಿ ನಡೆದುಕೊಳ್ಳುತ್ತಿದ್ದ ಆತ ಮರುದಿನದಿಂದ ತಣ್ಣಗೆ ನಡೆದುಕೊಂಡುದ್ದಲ್ಲದೆ, ಕೆಲಸದಿಂದ ಹೊರಗೆ ದಬ್ಬಿದ ಮೊದಲ ವ್ಯಕ್ತಿ ವಿಭಾ ಆದಳು. ವಿಭಾ ಅದೃಷ್ಟವಂತೆ, ದೈಹಿಕವಾಗಿ ಮಾನಸಿಕವಾಗಿ ಸಿಕ್ಕಿಬೀಳದೆ ತಪ್ಪಿಸಿಕೊಂಡಳು. ಆದರೆ ಎಲ್ಲ ಮಹಿಳೆಯರೂ ಇಷ್ಟು ಸುಲಭವಾಗಿ ಲೈಂಗಿಕ ಕಿರುಕುಳದಿಂದ ಪಾರಾಗಿಲ್ಲ. ಅತ್ಯಂತ ಅಚ್ಚರಿ ಮತ್ತು ಆಘಾತ ಹುಟ್ಟಿಸುವುದು ಹೊರನೋಟಕ್ಕೆ, ಹೊರಜಗತ್ತಿಗೆ ಅತ್ಯಂತ ಗೌರವಾನ್ವಿತವಾಗಿ ಕಾಣುವ ವ್ಯಕ್ತಿಗಳ ಅಂತರಾಳದಲ್ಲಿ ಎಂತೆಂತಹ ಘಟಸರ್ಪಗಳು ಮನೆಮಾಡಿವೆ ಎಂಬುದು. ಇತ್ತೀಚೆಗೆ ಚರ್ಚೆಯಲ್ಲಿದ್ದ ಅಮೆರಿಕದ ಆಲನ್-ಮಾರ್ಥಾ ಕೇಸು ಈ ದಿಕ್ಕಿನಲ್ಲಿ ಬಹಳಷ್ಟು ಬೆಳಕು ಚೆಲ್ಲುತ್ತದೆ, ಚಿಂತನೆಗೆ ದೂಡುತ್ತದೆ.

ಆಲನ್ ಶ್ರೆರ್ನಿ ಅತ್ಯಂತ ಪ್ರಖರ ಬುದ್ಧಿಯ ರಸಾಯನಶಾಸ್ತ್ರಜ್ಞ. ಆತನ ಹೆಸರಿನಲ್ಲಿ 15 ಪೇಟೆಂಟಗಳಿದ್ದವು. 35 ವರ್ಷಗಳ ಸುಖೀ ದಾಂಪತ್ಯ. ಅಮೆರಿಕದ ಮೇರಿಲ್ಯಾಂಡದಲ್ಲಿ ಸುಂದರ ಎಸ್ಟೇಟ್‌ನಲ್ಲಿ ವಾಸವಾಗಿದ್ದ ಆಲನದು ಎಲ್ಲಾ ರೀತಿಯಲ್ಲಿ ನೋಡಿದರು 'ನಾರ್ಮಲ್' ಬದುಕು. ಈತನ ಬುದ್ಧಿವಂತಿಕೆ, ನಡವಳಿಕೆ ಎಲ್ಲರನ್ನೂ ಮರುಳು ಮಾಡಿತ್ತು. ಅನೇಕ ಕಂಪನಿಗಳಲ್ಲಿ ಮೇಲ್ಪಂಕ್ತಿಯ ಹುದ್ದೆಯಲ್ಲಿದ್ದ ಆಲನ್ 'ಓಶಿಯಾನಿಕ್ಸ್ ಬಯೋಸಯನ್ಸ್' ಕಂಪನಿಗೆ ಸೇರಿಕೊಂಡ. ಇಲ್ಲಿ ಆತ 28 ವರ್ಷದ ವಿವಾಹಿತಳಾದ ಮಾರ್ಥಾ ಬ್ರಾಡ್ಲಿಯನ್ನು ಭೇಟಿಯಾದ. ಚುರುಕಿನ ಎಳೆಯ ಈ ಸುಂದರ ಹುಡುಗಿ ಆಲನನನ್ನು ತಟ್ಟನೆ ಆಕರ್ಷಿಸಿದಳು. ಚಕಮಕಿ ಮಾತಿನ ಈ ಹುಡುಗಿ ಎಲ್ಲರೊಡನೆ ಹರಟುವಂತೆ ಆಲನ ಜೊತೆಯಲ್ಲೂ ಹರಟುತ್ತಿದ್ದಳು. ಒಂದು ದಿನ ಆಲನ್ ತುಂಬಾ ಖಿನ್ನನಾಗಿದ್ದ ಮಾರ್ಥಾಳೊಡನೆ ತನ್ನ ತೊಂದರೆಗಳನ್ನು ಹೇಳಿಕೊಳ್ಳತೊಡಗಿದ. ದಿನೇ ದಿನೇ ಅವನ ಸಮಸ್ಯೆಗಳ ಬೆಟ್ಟವಾಗತೊಡಗಿತು. 'ತನ್ನ ಹೆಂಡತಿ ತನಗೆ ಮೋಸ ಮಾಡುತ್ತಿದ್ದಾಳೆ' ಎಂದು ಒಂದು ದಿನ ಗೋಳಿಟ್ಟಾಗ ಮಾರ್ಥಾಳ ಮನ ಕರಗಿತ್ತು. ಒಂದು ದಿನ 'ತನಗೆ ಕರುಳಿನ ಕ್ಯಾನ್ಸರ್ ಇದೆ ಎಂದು ಡಾಕ್ಟರ್ ಹೇಳಿದರು' ಎಂದಾಗ ಮಾರ್ಥಾ ತುಂಬಾ ಅನುಕಂಪ ವ್ಯಕ್ತಪಡಿಸಿದಳು. ಕೆಲವೇ ದಿನಗಳ ನಂತರ ಖುಷಿಯಾಗಿ ಹಿಂತಿರುಗಿ ಹೇಳಿದ 'ಇಲ್ಲ ತಪ್ಪು ತಪಾಸಣೆಯಾಗಿತ್ತು ಕ್ಯಾನ್ಸರ್ ಇಲ್ಲ' ಎಂದ. ತಾನು 'ಡೆಬ್ಬಿ ಎಂಬ ಸುಂದರ ಹುಡುಗಿಯನ್ನು ಭೇಟಿಯಾದದ್ದಾಗಿಯೂ, ಆಕೆಯನ್ನು ಪ್ರೀತಿಸುತ್ತಿರುವುದಾಗಿಯೂ' ಹೇಳಿದ. ಆದರೆ ಇಷ್ಟು ಹೊತ್ತಿಗೆ ಮಾರ್ಥಾಗೆ ಆಲನನಲ್ಲಿ 'ಏನೋ ಸರಿ ಇಲ್ಲ' ಎನಿಸತೊಡಗಿತ್ತು. 'ಏನು' ಎಂದು ಬೆರಳಿಟ್ಟು ತೋರುವಂತಹುದು ಇರದಿದ್ದರೂ ವಿಚಿತ್ರ ಅನುಭವ, ಇರುಸುಮುರುಸಿನ ಭಾವ. ಆಕೆಗೆ ಏಕೋ, ಆತ ಹೇಳಿದ್ದೆಲ್ಲ ಕಟ್ಟುಕತೆ ಅನಿಸತೊಡಗಿತ್ತು. 'ಕೆಲವು ತಿಂಗಳ ನಂತರ ಒಂದು ದಿನ ಇದ್ದಕ್ಕಿದ್ದಂತೆ ಮಾರ್ಥಾಗೆ ಫೋನ್ ಮಾಡಿ 'ಡೆಬ್ಬಿ ಅಪಘಾತದಲ್ಲಿ ಸತ್ತು ಹೋದಳು' ಎಂದು ಬೊಬ್ಬೆ ಹಾಕಿದ. ಡೆಬ್ಬಿ ಎಂಬ ವ್ಯಕ್ತಿಯೇ ಇರಲಿಲ್ಲ ಎಂದು ಮಾರ್ಥಾಗೆ ಅರಿವಾದಾಗ ಆಘಾತ. ಇಷ್ಟು ಹೊತ್ತಿಗೆ ಮಾರ್ಥಾಗೆ ಆಲನ್ ತನ್ನ ಬೆನ್ನು ಬಿದ್ದಿದ್ದಾನೆ ಎಂದು ತಿಳಿದು ಹೋಗಿತ್ತು. ತನ್ನನ್ನು ಆಲನ್ ಸತತವಾಗಿ ಹಿಂಬಾಲಿಸುತ್ತಿದ್ದುದೂ ಅರಿವಾಯಿತು. ಒಂದು ವಾರಾಂತ್ಯ ಪತಿಯೊಡನೆ ಹೊರಗೆ ಹೋಗಿ ಹಿಂತಿರುಗಿದಾಗ, ಅವಳ ಮನೆಯ ಬೀಗ ಒಡೆದಿತ್ತು, ಅವಳ ಒಳುಡುಪುಗಳೆಲ್ಲ ಕಾಣೆಯಾಗಿದ್ದವು. ಮಾರ್ಥಾಗೆ ಆಲನನಿಂದ ಹೇಳಿಕೊಳ್ಳಲಾರದಷ್ಟು ಕಿರುಕುಳ ಆರಂಭವಾಯಿತು, ಕಛೇರಿಯ ಒಳಗೂ, ಹೊರಗೂ. ಮಾರ್ಥಾ ರೇಗಿ ಪ್ರತಿಭಟಿಸಿದಾಗ ಆಲನ್ ಬುಸುಗುಟ್ಟಿದ. ಒಂದು ದಿನ ಆಲನ್, ಮಾರ್ಥಾಳ ಮೇಜಿನ ಮೇಲೆ ಒಂದು ದಪ್ಪ ಲಕೋಟೆ ಎಸೆದು 'ಇದು ನನ್ನ ಅಂಚೆ ಡಬ್ಬಿಯಲ್ಲಿತ್ತು. ನಿನ್ನದು ಅಂತ ಕಾಣಿಸುತ್ತದೆ

ತಗೋ' ಎಂದ. ತೆಗೆದು ನೋಡಿದರೆ ಅದರಲ್ಲಿ ಮಾರ್ಥಾಳ ಮನೆಯಿಂದ ಕಾಣೆಯಾಗಿದ್ದ ಬ್ರಾಗಳಿದ್ದವು! ಜೊತೆಗೆ ಒಂದ ಸಾಲಿನ ಎಚ್ಚರಿಕೆಯ ಪತ್ರ 'ಇಲ್ಲಿಗೇ ಮುಗಿಯಿತು ಅಂದುಕೊಳ್ಳಬೇಡ'. ಮಾರ್ಥಾ ತಕ್ಷಣ ಪೋಲಿಸರನ್ನು ಕರೆದಳು. ಆಲನ್‌ನನ್ನು ಮಾರ್ಥಾ ಮನೆ ಹೊಕ್ಕು ಕಳ್ಳತನ ಮಾಡಿದ್ದಕ್ಕೂ, ಕಛೇರಿಯಲ್ಲಿ ಕಿರುಕುಳ ನೀಡಿದ್ದಕ್ಕೂ ಆಪಾದಿಸಿ, ದಸ್ತಗಿರಿ ಮಾಡಿದರು. ಆದರೆ ಆಲನ್ ಆ ಬ್ರಾಗಳು ತನಗೆ ಅಂಚೆಯ ಮೂಲಕ ಬಂದಿತು' ಎಂದೇ ಸಾಧಿಸಿದ. ತಾನು ಮಾರ್ಥಾಳ ಬೆನ್ನು ಬಿದ್ದಿಲ್ಲ, ಆಕೆಯ ತನ್ನ ಸ್ನೇಹಮಯ ವರ್ತನೆಯನ್ನು ತಪ್ಪು ತಿಳಿದು ನನ್ನ ಬೆನ್ನು ಬಿದ್ದಿದ್ದಾಳೆ ಎಂದು ಪ್ರತಿ ಆಪಾದಿಸಿದ. ಆಲನ್ ತಪ್ಪಿತಸ್ಥ ಎನ್ನಲು ಯಾವ ಪುರಾವೆಯೂ ಇರಲಿಲ್ಲ. ಜೊತೆಗೆ ಆತ ಗೌರವಾನ್ವಿತ ಹಿರಿಯ ವಿಜ್ಞಾನಿ. ಆಲನನನ್ನು ಬಿಡುಗಡೆ ಮಾಡಿದರು.

ಅಲ್ಲಿಗೆ ಕತೆ ಮುಗಿಯಲಿಲ್ಲ. ಒಂದು ದಿನ ಮಾರ್ಥಾಳ ಕಾರಿನ ಕಿಟಕಿಯಲ್ಲಿ 'ಐ ಲವ್ ಯು' ಎಂದು ಕೊರೆದಿತ್ತು. ಮತ್ತೊಂದು ದಿನ ಮಾರ್ಥಾ ಕಾರಿಗೆ ಹಿಂತಿರುಗಿದಾಗ, ಸೀಟಿನ ಮೇಲೆ ಬೆಳ್ಳಿಯ ಸಣ್ಣ ಚೆಂಡುಗಳು ಕಂಡವು, ಮುಟ್ಟಿದರೆ ತುಂಡಾದವು. ಪೊಲಿಸರನ್ನು ಕರೆದಾಗ, ಅವು ದ್ರವ ರೂಪದ ಪಾದರಸ ಎಂದು ತಿಳಿದು ಬಂದಿತ್ತು. ಕಾರಿನ 'ಹೀಟರ್' ಆನ್ ಮಾಡಿದ್ದರೆ, ಪಾದರಸ ಆವಿಯಾಗಿ ಶ್ವಾಸಕೋಶಗಳನ್ನು ಪ್ರವೇಶಿಸಿ, ಇಲ್ಲ ರಕ್ತ ಒಳಹೊಕ್ಕು ಅವಯವಗಳನ್ನು ಹಾಳುಗೆಡವುತ್ತಿತ್ತು, ಸಾವೂ ಸಂಭವಿಸಬಲ್ಲದಿತ್ತು. ಪೋಲೀಸರಿಗೂ ಆಲನ ಮೇಲೆ ಅನುಮಾನವಿದ್ದರೂ ಪುರಾವೆ ಇರಲಿಲ್ಲ. ಅವರು ಒಂದು ಯೋಜನೆ ಹಾಕಿದರು. ಮಾರ್ಥಾಳ ಮನೆಯಂಗಳದಿ ನಿಲ್ಲಿಸಿದ ಕಾರಿಗೆ 'ನೈಟ್ ವಿಷನ್ ಕ್ಯಾಮರಾ' ಗುರಿಯಿಟ್ಟು ನೆಟ್ಟರು. ಕತ್ತಲಲ್ಲೂ ಕಾಣಿಸಬಲ್ಲ ಕ್ಯಾಮರಾ ಅದು. ಮರುದಿನ ಆಲನ್ ಮಾರ್ಥಾಳ ಕಾರಿನ ಬಳಿ ಏನೋ ಮಾಡುತ್ತಿರುವುದನ್ನು ಕ್ಯಾಮರಾ ಸೆರೆ ಹಿಡಿದಿತ್ತು. ಪುರಾವೆ ದೊರೆತ ಪೋಲಿಸರು ಆಲನನನ್ನು ದಸ್ತಗಿರಿ ಮಾಡಿದರು. ಆತನ ಮನೆಯನ್ನು ಶೋಧಿಸಿದಾಗ, ಮನೆಯ ಬೇಸ್‌ಮೆಂಟ್‌ನಲ್ಲಿ ಮಾರ್ಥಾಳನ್ನು ಕುರಿತು ಆಲನ್ ಬರೆದ ಹಿಂಸೆ ಮತ್ತು ಲೈಂಗಿಕ ವರ್ಣನೆಯ ಅಸಹ್ಯದ ಕವಿತೆಗಳು ನೂರಾರು ಬಿದ್ದಿದ್ದವು. ಮಾರ್ಥಾಳ ಛಾಯಾಚಿತ್ರಗಳು, ಅವಳು ಎಂದು, ಎಲ್ಲಿಗೆ ಹೋಗಿದ್ದಳು, ಯಾವಾಗ ಬಂದಳು, ಎಲ್ಲದರ ಬೆನ್ನಟ್ಟಿ ಗುರುತು ಹಾಕಿಕೊಂಡಿದ್ದ ಮಾಹಿತಿ ಅಲ್ಲಿತ್ತು. ಆಕೆಯ ಮನೆಯ ನಕಲು ಕೀಲಿಗಳೂ ಸಿಕ್ಕವು. ಕೇಸು ನಡೆಯಿತು, ಆಲನ್ ತಪ್ಪಿತಸ್ಥನೆಂದು ಕೋರ್ಟು ಘೋಷಿಸಿತು. ತೀರ್ಪು ಕೇಳಿದೊಡನೆ ಆಲನ್ ಸಯನೈಡ್ ನುಂಗಿ ಅಲ್ಲಿಯೇ ಪ್ರಾಣಬಿಟ್ಟ. ಅತ್ಯಂತ ವಿಚಿತ್ರವಾಗಿ ಕಂಡರೂ ಸತ್ಯದ ಕತೆ ಇದು. ಓರ್ವ ಗೌರವಾನ್ವಿತ ವಿಜ್ಞಾನಿ, ವಿವಾಹಿತ, ಬುದ್ಧಿವಂತ ಆದರೆ ಆತನೊಳಗೆ ಯಾರೂ ಊಹಿಸದ ಒಂದು ಕಪ್ಪು ಕತ್ತಲ ಮುಖವಿತ್ತು. ಮಾರ್ಥಾ ಮಾತ್ರ ಕಂಡ ಮುಖ.

ಪ್ರತಿಯೊಬ್ಬರಲ್ಲೂ ಸಮಾಜ ಕಾಣದ, ಅವರ ಅತಿ ಆತ್ಮೀಯರಿಗೂ ಪರಿಚಯವಿಲ್ಲದ ಕತ್ತಲ ಮುಖಗಳು ಇರಬಹುದು. ಬಹಳಷ್ಟು ಬಾರಿ ಸಮಾಜದ ಕಟ್ಟುಕಟ್ಟಳೆಗಳು ಮಹಿಳೆಗೆ ಸಂಯಮದ ನೀತಿ ನಡೆಯನ್ನು, ಕಲಿಕೆಯ ಭಾಗವಾಗವಾಗಿಸುತ್ತದೆ, ಹಾಗೆಂದೇ ಮಹಿಳೆಯರು ತಮ್ಮೊಳಗಿನ ಕಪ್ಪು ಮುಖಗಳು ಹದ್ದು ಮೀರಿ ಹೊರ ಬೀಳದಂತೆ ನಿಯಂತ್ರಿಸುವುದರಲ್ಲಿ ಯಶಸ್ವಿಯಾಗುತ್ತಾರೆ. ಅಂತಹ ನಿಯಂತ್ರಣ ಸಂಯಮವನ್ನು ಗಂಡಸರಿಗೆ ಹೇಳಿಕೊಟ್ಟಿಲ್ಲದ ಕಾರಣ, ಏನು ಮಾಡಿದರೂ 'ಗಂಡಸು ತಾನೆ' ಎಂಬ ರಿಯಾಯಿತಿ, ಅವರ ಕಪ್ಪು ಮುಖಗಳು ಎಗ್ಗಿಲ್ಲದೆ ಹೊರಬೀಳಲು ಸಹಾಯಕವಾಗುತ್ತಿವೆ.

ಬೆಂಗಳೂರಿನ ಸ್ವಾತಿ ಐಯಂಗಾರ್ ಅನುಭವ ಇದೇ ಬಗೆಯದು. ಆಕೆಯ ಬಾಸ್ ಕಛೇರಿಯಲ್ಲೆಲ್ಲ ತುಂಬಾ ಒಳ್ಳೆಯವರೆಂದು ಹೆಸರು ಮಾಡಿದವರು. ನಯ ವಿನಯದ ಗಂಭೀರ ವ್ಯಕ್ತಿ ಎಂದೇ ಪರಿಚಿತ. ಅಂತಹ ಮನುಷ್ಯ ಮೆಲ್ಲನೆ ಸ್ವಾತಿಯನ್ನು ವಿನಾಕಾರಣ ಮುಟ್ಟತೊಡಗಿದ. ಮೊದಲು ಪೇಪರ್ ಫೈಲ್ ಕೊಡುವಾಗ, ಬೆರಳುಗಳನ್ನು ಸವರುತ್ತಿದ್ದ. ಮೆಲ್ಲನೆ ಕ್ಯಾಬಿನನ ಏಕಾಂತದಲ್ಲಿದ್ದಾಗ ಅತ್ಯಂತ ಪೋಲಿ ಮಾತುಗಳನ್ನು ಆಡತೊಡಗಿದ. ಕೆಲಸ ಆಕೆಗೆ ತುಂಬಾ ಅಗತ್ಯವಿತ್ತು, ಈ ಕೆಲಸದಲ್ಲಿ ಬಹಳಷ್ಟು ಕಷ್ಟಪಟ್ಟು ದುಡಿದಿದ್ದಳು. 'ಯಾರಿಗಾದರೂ ಹೇಳಿದರೆ ಯಾರೂ ತನ್ನನ್ನು ನಂಬುವುದಿಲ್ಲ' ಎನ್ನುತ್ತಾಳೆ. ಸಮಾಜಕ್ಕೆ, ತನ್ನ ಕುಟುಂಬಕ್ಕೆ ಹೊರಗಿನ ಜಗತ್ತಿಗೆಲ ಇವರು ತೋರಿಸುವುದು - 'ಪರ್ಫೆಕ್ಟ್ ಜಂಟಲಮನ್' ಮುಖ. ಆದರೆ ಆಳದಲ್ಲೆಲ್ಲೊ ಅಡಗಿದ ಕಪ್ಪು ಮುಖ ಬಹುತೇಕ ಬಾರಿ ಹೊರಬರುವುದು ಮನೆಯಲ್ಲಲ್ಲ, ಕಛೇರಿಯಲ್ಲಿ, ಇತರ ಹೆಂಗಸರ ಎದುರಲ್ಲಿ, ಅದೂ ಅತ್ಯಂತ ಗೋಪ್ಯವಾಗಿ. ಇವರೆಲ್ಲ ದೂರು ಕೊಡಲು ಹಿಂಜರಿದ ಮಹಿಳೆಯರು. ಹಾಗೆಂದು ದೂರು ಕೊಟ್ಟೊಡನೆ ತಟ್ಟನೆ ನ್ಯಾಯ ದೊರೆತಿದೆ ಎಂದಲ್ಲ.

ಸುತಪ ರಾಯ್, ಕಲಕತ್ತೆಯ 'ಸೀಗಲ್ ಬುಕ್‌ಸ್ಟೋರ್'ನಲ್ಲಿ ದುಡಿಯುತ್ತಿದ್ದಾಕೆ. ಪುಸ್ತಕದಂಗಡಿಯ ಎಂ.ಡಿ.ಯಾಗಿದ್ದ ತಪನ್ ಚಟರ್ಜಿಯ ಕಿರುಕುಳ ತಡೆಯಲಾರದೆ ಸುತಪಾ 'ಸೀಗಲ್'ನ ಮತ್ತೊಬ್ಬ ಎಂ.ಡಿ. ಅಮಿತ್ ದೇಬ್ ಅವರಿಗೆ ದೂರು ನೀಡಿದಳು. ಇದಕ್ಕೆ ಮೊದಲೂ ತಪನ್ ಬಗ್ಗೆ ಮತ್ತೊಬ್ಬ ಮಹಿಳೆ ದೂರಿದ್ದು ತಿಳಿದು ಬಂದಿತ್ತು. ದೂರು ನೀಡಿ ಆಕೆ ಕೆಲಸ ಬಿಟ್ಟಿದ್ದಳು. 'ಸೀಗಲ್'ನ ಮಾಲೀಕರು ಮತ್ತು ನಿರ್ದೇಶಕರಾದ ನವೀನ್ ಕಿಶೋರ್‌ಗೆ ಎಷ್ಟೇ ದೂರು ನೀಡಿದರೂ ಪರಿಣಾಮ ಸೊನ್ನೆ. ನವೀನ್ 'ನಿಮ್ಮದು ತಪ್ಪು ತಿಳುವಳಿಕೆ' ಎಂದು ತಳ್ಳಿ ಹಾಕಿದರು. ಇಷ್ಟು ಸಾಲದು ಎಂಬಂತೆ ಸುತಾಪಳನ್ನೇ 'ಅಸಮರ್ಥಳು' ಎಂದು ಕೆಲಸದಿಂದ ತೆಗೆದು ಹೊರ ಹಾಕಿದರು. ಸುತಾಪ 'ನಾರಿ ನಿರ್ಜತನ್ ಪ್ರತಿರೋಧ್' ಮಹಿಳಾ ಸಂಘಟನೆಯೊಡಗೂಡಿ ನಡೆಸಿದ ಸುದೀರ್ಘ ಹೋರಾಟದ

ಕೊನೆಯಲ್ಲಿ ನವೀನ್ ಕಿಶೋರ್ ಒಂದು ಕ್ಷಮಾ ಪತ್ರ ನೀಡಿ, 60,000 ರೂಪಾಯಿಯ ಅಲ್ಪ ಪರಿಹಾರ ಧನವನ್ನು ಕೊಟ್ಟು ಕೈತೊಳೆದುಕೊಂಡರು. ಇದನ್ನು 'ಮಹಿಳಾ ವಿಜಯ' ಎಂದು ಸಾರಿದ್ದು ನಿಜಕ್ಕೂ ಹಾಸ್ಯಸ್ಪದ. ತಪನ್ ಚಟರ್ಜಿ ಇಂದಿಗೂ 'ಸೀಗಲ್'ನಲ್ಲಿಯೇ ಆರಾಮಾಗಿ ಕೆಲಸ ಮಾಡುತ್ತಿದ್ದಾರೆ. ಸುತುಪಾಗೆ ಮತ್ತೆ ಕೆಲಸ ಸಿಕ್ಕಿಲ್ಲ.

ಲೈಂಗಿಕ ಕಿರುಕುಳದ ಬಗ್ಗೆ ದೂರು ಕೊಡುವಾಗ ನಂಬುವಂತಹ ಪುರಾವೆ, ಸಾಕ್ಷಿಗಳು ಬೇಕಾಗುತ್ತವೆ. ಲೈಂಗಿಕ ಕಿರುಕುಳ ಬಹಳಷ್ಟು ಬಾರಿ ಏಕಾಂತದಲ್ಲಿ ನಡೆಯುತ್ತದೆ, ಕ್ಯಾಬಿನಗೆ ಕರೆದಾಗ, ಕಛೇರಿಯ ಹೊರಗೆಲಸಗಳಿಗೆ ಹೊರ ಊರುಗಳಿಗೆ ಹೋದಾಗ. ಇತರರಿಗೆ ಇಂತಹ ವ್ಯಕ್ತಿಗಳ 'ಗೋಮುಖ ವ್ಯಾಘ್ರತ್ವ'ವನ್ನು ಸಾಬೀತು ಮಾಡುವುದು ಸುಲಭವಲ್ಲ. ಸಾಬೀತಾದಾಗಲು ಇಂತಹವರಿಗೆ ಹೆಚ್ಚಿನ ಶಿಕ್ಷೆಯಾಗದೆ ಇರುವುದು, ತಪನ್ ಚಟರ್ಜಿಯಂತಹ ಕೇಸುಗಳಲ್ಲಿ ಶಿಕ್ಷೆಯೇ ಆಗದೆ, ಬಲಿಯಾದಾಕೆಯೇ ಕೆಲಸ ಕಳೆದು ಕೊಳ್ಳುವುದು ನೋಡಿದರೆ, ಪರಿಸ್ಥಿತಿ ಪ್ರೋತ್ಸಾಹದಾಯಕವಿಲ್ಲ. ದೂರು ಮೇಲಧಿಕಾರಿ, ಅಧಿಕಾರವಿರುವ ವ್ಯಕ್ತಿಯ ವಿರುದ್ಧವಾದರೆ, ಹೆದರಿಕೆ, ಬೆದರಿಕೆಗಳನ್ನು ಎದುರಿಸಬೇಕಾಗುತ್ತದೆ. ಹೀಗಿದ್ದರೂ ಸುಪ್ರೀಂ ಕೋರ್ಟ್ ಕೆಲಸದ ಸ್ಥಳದಲ್ಲಿಯ ಲೈಂಗಿಕ ಕಿರುಕುಳವನ್ನು ಗಮನಿಸಿರುವುದು, ಕಂಪನಿಗಳಲ್ಲಿ 'ದೂರು ವಿಚಾರಣಾ ಸಮಿತಿ' ನಿರ್ಮಿಸಬೇಕೆಂದು ನಿರ್ದೇಶಿಸಿರುವುದು ಅತ್ಯಂತ ಸ್ವಾಗತಾರ್ಹ ವಿಷಯ. ಮುಸುಕಿನಡಿಯಲ್ಲಿ ಪಿಸುಮಾತಿನಲ್ಲಿ ಮುಚ್ಚಿಟ್ಟ, ಒಳಗೊಳಗೇ ಅನುಭವಿಸುತ್ತಿದ್ದ ಸಮಸ್ಯೆ ಇಂದು ಬೆಳಕಿಗೆ ಬಂದಿದೆ. ಈ 'ದೂರು ವಿಚಾರಣಾ ಸಮಿತಿ' ಗಂಭೀರವಾಗಿ ಕೆಲಸ ಮಾಡಲು ಆರಂಭಿಸಿದಾಗ, ನ್ಯಾಯ ದೊರೆಯಲು ಶುರುವಾದಾಗ, ಮಹಿಳೆಯರಲ್ಲಿ ಹೆಚ್ಚು ಧೈರ್ಯ ಮೂಡಬಹುದು. 'ತಮ್ಮ ಕಾರ್ಯಸ್ಥಾನದಲ್ಲಿ ಲೈಂಗಿಕ ಕಿರುಕುಳವಿದೆ' ಎಂಬ ಅರಿವು, ಜಾಗೃತಿ ಇಂತಹ ಬಲಿಯಾದರತ್ತ ಗಮನ ಹರಿಸಲು ಸಾಧ್ಯವಾಗಬಹುದು. ಅತ್ಯಾಚಾರಿಗಳನ್ನು ಶಿಕ್ಷೆಗೆ ಗುರಿಪಡಿಸಲು ಕಾರಣವಾಬಹುದು. ಕೆಲಸದ ಜಾಗದಲ್ಲಿ ಕಂಪನಿಗಳು ಮಾಡಬೇಕಾದಷ್ಟು ಬಹಳಷ್ಟು ಇದೆ. ಜೊತೆಗೇ ಇನ್ನೊಂದು ದಿಕ್ಕಿನಲ್ಲಿ ಸಂಶೋಧನೆಯ ಅಗತ್ಯವಿದೆ. ಗಂಡು ಮಕ್ಕಳನ್ನು ಬೆಳೆಸುವ ರೀತಿ, ಮನೋವಿಕಲ್ಪಗಳನ್ನು ಕುರಿತು ಜಾಗೃತಿ - ಇವೆಲ್ಲವೂ ಮನಃಶಾಸ್ತ್ರಜ್ಞರ, ಸಮಾಜಶಾಸ್ತ್ರಜ್ಞರ ತೀವ್ರ ಅಧ್ಯಯನಕ್ಕೆ ಒಳಗಾಗಬೇಕಿದೆ. ಹುಡುಗಿಯರನ್ನು ಎಗ್ಗಿಲ್ಲದೆ ಸತಾಯಿಸುವ, ಹಿಂಬಾಲಿಸುವ ಪಡ್ಡೆ ಹುಡುಗರ ಪಾತ್ರಗಳನ್ನು ಅತ್ಯಂತ ರೋಚಕವಾಗಿ 'ಹೀರೋ' ಆಗಿ ಪ್ರತಿಬಿಂಬಿಸುವ ಸಿನಿಮಾಗಳನ್ನು ನಿಷೇಧಿಸುವುದೂ ಸಹಾಯಕವಾಗಬಲ್ಲದು.

◆

ಕಳೆದು ಹೋದ ಅಮೂಲ್ಯ ಗೀತೆಗಳು

ಮೊನ್ನೆ ಕೆಲಸದ ಮೇಲೆ ಇಸ್ರೇಲ್‌ಗೆ ಹೋಗಿ ಮುಂಬಯಿಗೆ ಹಿಂತಿರುಗಿದಾಗ, 'ಚೆಕ್-ಇನ್' ಮಾಡಿದ್ದ ನನ್ನ ಲಗೇಜ್ ಬರಲೇ ಇಲ್ಲ. ಲಗ್ಗೇಜ್ ಕಳೆದು ಹೋಗಿದೆ ಎಂದು ದೂರು ಕೊಡಲು ಹೋದಾಗ, ಅದರಲ್ಲಿ 'ಅಮೂಲ್ಯವಾದದ್ದು ಏನಾದರೂ ಇತ್ತೆ?' ಪ್ರಶ್ನಿಸಿದರು. ತುಂಬಾ ಮುಖ್ಯವಾದ ನನ್ನ ಫೈಲುಗಳೆಲ್ಲ ಅದರಲ್ಲಿದ್ದವು, ಜೊತೆಗೆ ಇಸ್ರೇಲ್, ಜೆರೂಸೆಲಮ್ ಕುರಿತು ನಾನು ಕೊಂಡಿದ್ದ ಪುಸ್ತಕಗಳು, ಹೊಡೆದ ರೀಲುಗಟ್ಟಲೆ ಫೋಟೋಗಳು ಅದರಲ್ಲಿದ್ದವು. ಅವೆಲ್ಲ ನನಗೆ ತುಂಬಾ ಅಮೂಲ್ಯವಾಗಿದ್ದವು, ಆದರೆ ವಿಮಾನ ನಿಲ್ದಾಣದ ಅಧಿಕಾರಿಗಳಿಗೆ 'ಅವೆಲ್ಲ ಒಂದಷ್ಟು ಪೇಪರು, ಫೈಲು, ಪುಸ್ತಕ' ಎನಿಸಿತ್ತು. ಲಗೇಜ್ ಸಿಗಲೇ ಇಲ್ಲ ಎಂದರೆ, 'ಕೆ.ಜಿ.ಗೆ ಇಷ್ಟು ಡಾಲರ್' ಎಂದು, ಪರಿಹಾರ ನೀಡಲಿದ್ದರು. ನನ್ನ ಸಂಕಟ ಹೇಳತೀರದಾಗಿತ್ತು.

ಇಂದು ಪ್ರಸಿದ್ಧ ಗಾಯಕಿ ಮೃದುಲಾ ದೇಸಾಯಿ ಅವರ ಪರಿಸ್ಥಿತಿಯೂ ಇದೇ ಆಗಿದೆ. ಹದಿನೈದು ವರ್ಷಗಳ ಕಾಲ, ಉತ್ತರ ಭಾರತದ ಮೂಲೆ ಮೂಲೆಯ ಹಳ್ಳಿಗಾಡುಗಳು, ಗುಡ್ಡಗಾಡುಗಳಲ್ಲಿ ಸುತ್ತಿ, ವಯಸ್ಸಾದ ಹಿರಿಯ ಮಹಿಳೆಯರು, ಪಂಡಿತರು, ಕಥಾಕಾರರು, ಸಾಧುಗಳಿಂದ ಈಕೆ, 'ಮರೆತು ಹೋಗಿದ್ದ 3000 ಗೀತೆ'ಗಳನ್ನು ಸಂಗ್ರಹಿಸಿದ್ದರು. ಅದೆಷ್ಟು ಭಾಷೆಯಲ್ಲಿದ್ದ ಗೀತೆಗಳು - ಭೋಜಪುರಿ, ಮಾರ್ವಾಡಿ, ಗುಜರಾತಿ, ಅವಧಿ, ಬ್ರಿಜ್ ಭಾಷಾ, ಪಂಜಾಬಿ ಮುಂತಾದ ಭಾಷೆಯ ಗೀತೆಗಳು. 'ವಾರಣಾಸಿಯ ಘಾಟ್‌ನ ಆ ಸಾಧುವಿನ ಬಳಿ ಗಂಟೆಗಟ್ಟಲೆ ಕುಳಿತು, 'ಹೋರಿ - ಗೀತ್', ರಾಧಾ ಕೃಷ್ಣರ ಹೋಲಿ ಆಟದ ಗೀತೆಗಳನ್ನ ಪುನಃ ಪುನಃ ಹೇಳಿಸಿ, ಗುರುತು ಹಾಕಿಕೊಂಡಿದ್ದೆ, ನೆನಪಿಸಿಕೊಳ್ಳುತ್ತಾರೆ. ಅಕ್ಟೋಬರ್ 27ನೇ ತಾರೀಖು ಲಂಡನ್‌ನಿಂದ ಮುಂಬಯಿಗೆ ಮೃದುಲಾ ಬಂದಿಳಿದಾಗ, ಅಷ್ಟೆಲ್ಲ ಕಷ್ಟಪಟ್ಟು ಸಂಗ್ರಹಿಸಿದ ಗೀತೆಗಳಿದ್ದ ಅವರ ಸುಟ್‌ಕೇಸ್ ನಾಪತ್ತೆ. ನಿಲ್ದಾಣದ ಅಧಿಕಾರಿಗಳಿಗೆ ಇದೂ 'ಕಳೆದು ಹೋದ' ಎಷ್ಟೋ ಲಗೇಜ್‌ನಲ್ಲಿ ಒಂದು. ಕೆ.ಜಿ.ಗಿಷ್ಟು ಪರಿಹಾರ ನೀಡಿದರಾಯಿತು. ಹಾಡುವ ಮನಸ್ಥಿತಿಯನ್ನೇ ಕಳಕೊಂಡು, ಅದಾಗಲೆ ಆರು ಕಾರ್ಯಕ್ರಮಗಳನ್ನು ರದ್ದು ಮಾಡಿರುವ ಮೃದಾಳ, ತಮ್ಮ ಸೂಟ್‌ಕೇಸ್ ಪತ್ತೆಗಾಗಿ ಪರದಾಡುತ್ತಿದ್ದಾರೆ. ಏರ್‌ಲೈನ್ಸ್ ಅಧಿಕಾರಿಗಳು ಕೆ.ಜಿ.ಗಟ್ಟಲೆ ತೂಗದೆ, 'ಅಮೂಲ್ಯ ನಿಧಿ'ಯ ಬೆಲೆ ತಿಳಿದು ಪತ್ತೆ ಹಚ್ಚುತ್ತಾರೆಂದು ಹಾರೈಸೋಣ.

◆

RNI No. 45577/88

CPMG/KA/BG-8/2002
Book-Post/News Letter

To :

Smt/Sri

"Achala" 108, Skyline Surabhi,
14 - P , Vidyapeeta Road,
BSK III Stage,
Bangalore - 560 085